Reg. No. M. 1550

3–4–1936

IF NOT delivered please return to "KODAGU" OFFICE, MERCARA.

KODAGU

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ಅಚ್ಚುಮೆಚ್ಚಿನ ಮುದ್ರಣ ಕಲಸಕ್ಕೆ "ಕೊಡಗು" ಪ್ರೆಸ್ಸು, ಮಡಿಕೇರಿ.

ಹೆಚ್ಚಿನ ವಿಷಯಕ್ಕೆ ಕೂಡಲೆ ವಿಚಾರಿಸಿರಿ.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಸಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೩—೪—೧೯೩೬ [ಸಂಚಿಕೆ ೪೦

Telephon; 3145

By Appointment To H. E. The Governor of Madras.

Telegrams: 'PRECIOUS.'

Brooch

Necklace.

Ring.

Ring.

V. SUBRAMANIA IYER,

Jeweller, & Diamond Merchant,

52–19 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI.

BRANCHES:—

1. Madras,
2. Coondapoor.
3. Car Street, Mangalore.
4. Bunder, Mangalore.
5. Shimoga
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.

Paid up - Rs. 2,80,750.

Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—20 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦

ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦

ಪಾಲಿಸಿಯ ಶರತ್ತುಗಳು ಅತೀ ಸುಲಭ

ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.

ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶಪಾರಂಪರ್ಯ ಕಮಿಶನ್ ದೊರೆಯುವಂತಿದೆ.

ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾಗವನ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎನ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡ

52—42 ಬೆಂಗಳೂರು

ವಿವಿಧ ವಾರ್ತಾವಳಿ.

ದೇವಾಲಯ ಪ್ರವೇಶ ಚಳವಳಿ.

ಕೇರಳ ಪ್ರಾಂತಿಕ ಹರಿಜನ ಸೇವಕ ಸಂಘದ ದೇವಾಲಯ ಪ್ರವೇಶ ಸಮಿತಿಯವರು ಆ ಪ್ರಾಂತದಲ್ಲಿ ದೇವಾಲಯ ಪ್ರವೇಶ ಚಳವಳಿಯನ್ನು ಏಪ್ರೆಲ್ 5 ನೇ ತಾರೀಖಿನಿಂದ ಸುರುಮಾಡಬೇಕೆಂದು ಗೊತ್ತು ಮಾಡಿದ್ದಾರೆ.

—ooo—

ಹಿಂದೂ ದೇಶದ ಹೊರಗೆ ಸಲ್ಲುತ್ತಿರುವ ಸರಕಾರಿ ನೌಕರರ ಸಂಬಳ.

ಕಳೆದ ವರ್ಷದಲ್ಲಿ ಇಂಡಿಯೂ ಸರಕಾರದವರು ರೂ. 3.75 ಕೋಟಿಯನ್ನು ಹಿಂದೂ ದೇಶದ ಹೊರಗೆ ಸಲ್ಲಬೇಕಾದ ತಲಬಿಗಾಗಿ ವ್ಯಯಿಸಿದೆ. ಪೆನ್ಸನು ರೂಪದಿಂದ ಇಂಡಿಯೂ ಸರಕಾರವು ರೂ. 8 ಕೋಟಿಯನ್ನು ಹಿಂದೂ ದೇಶದ ಹೊರಗೆ ಖರ್ಚು ಮಾಡಿದೆ. ಇದೆಲ್ಲವೂ ಯುರೋಪಿಯನ್ ಉದ್ಯೋಗಸ್ಥರಿಗಾಗಿಯೇ.

—ooo—

ಹಿಂದೀ ಮಿಲಿಟೆರಿ ಶಾಲೆಗೆ ವೈಸರಾಯರ ಸಹಾಯ.

ಡಾ ಮೂಂಜೆಯವರು ತೆರೆಯಬೇಕೆಂದಿರುವ ಭೋಸಲೆ ಹಿಂದೂ ಯುವಕರ ದಂಡಿನ ಶಿಕ್ಷಣ ಶಾಲೆಗೆ ವೈಸರಾಯರಿಂದೇನಾದರೂ ಸಹಾಯವಾಗಬೇಕೆಂದು ಅವರನ್ನು ಕಂಡರು; ಅವರಿಗೆ ತಮ್ಮ ಶಾಲೆಯ ಉದ್ದೇಶ ಮುಂತಾದವುಗಳನ್ನು ತಿಳಿಸಿದರು. ಆಗ ವೈಸರಾಯರು 250 ರೂಪಾಯ ಸಹಾಯ ಕೊಟ್ಟರು. ಸ್ತುತ್ಯ.

—ooo—

ಅಮೇರಿಕದ ಭಯಂಕರ ನೆರೆ.

ಸಂಯುಕ್ತ ಅಮೇರಿಕದ ರಾಜಧಾನಿಯೂದ ನ್ಯೂಯೋರ್ಕಿನಲ್ಲಿ ಭಯಂಕರ ನೆರೆಯ ಪರಿಣಾಮವಾಗಿ 150 ಮಂದಿಗಳು ಮೃತರಾಗಿರುವರು. ಅನೇಕರು ಗಾಯಹೊಂದಿರುವರು. ಮಾತ್ರವಲ್ಲದೆ ಈ ನೆರೆಯಿಂದ ಮಿಲಿಯ ಡೊಲ್ಲರುಗಳು ನೆಷ್ಟವಾಗಿದೆಯೆಂದು ತಿಳಿದುಬರುತ್ತದೆ. ಅಲ್ಲಿನ ಓಹಿಯೂ ನದಿಯ ಆಣೆಕಟ್ಟು ಕಡಿದುಹೋದ್ದರಿಂದ ನೆರೆಯ ಸಂಭವಿಸಿತ್ತೆಂದು ತಿಳಿದುಬರುತ್ತದೆ. ನೆರೆಯಿಂದ ಕಷ್ಟಪಟ್ಟವರಿಗೆ ಸರಕಾರದಿಂದ ದ್ರವ್ಯಸಹಾಯ ಮಾಡುವ ಏರ್ಪಾಡಾಗಿದೆ.

—ooo—

ಅಸಾಮದಲ್ಲಿ ಕಾಂಗ್ರೆಸಿಗೆ ಜಯ.

ಎಸೆಂಬ್ಲಿಯ ಸಭಾಸದರಾದ ಅಸಾಮದ ಶ್ರೀ ಎನ್. ಸಿ. ಬಾಂಡೋಲಾಯಿ ಇವರ ನಿಧನದಿಂದ ಬರಿದಾದ ಸ್ಥಳದ ಉಪ ಚುನಾವಣೆ ಇದ್ದಿತು ಈ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಶ್ರೀ. ಕುಲಭಾರ ಎಂಬವರೂ, ರಾಷ್ಟ್ರೀಯ ಪಕ್ಷದಿಂದ ರಾವ್ ಬಹುದ್ದೂರ್ ವೃಂದಾವನ ಚಂದ್ರಗೋಸ್ವಾಮಿ ಎಂಬವರೂ ಉಮೇದುವಾರರಾಗಿದ್ದರು. ಗೋಸ್ವಾಮಿಯವರು ತಮ್ಮ ಅರ್ಜಿಯನ್ನು ತಿರುಗಿ ತೆಗೆದುಕೊಂಡದ್ದರಿಂದ ಶ್ರೀ. ಕುಲಭಾರಾ ಎಂಬವರು ಅವಿರೋಧವಾಗಿ ಆರಿಸಿಬಂದರು

—ooo—

ಜಗತ್ತಿನ ಪತ್ರಿಕೋದ್ಯಮ. ಅಮೇರಿಕಾಕ್ಕಿಂತ ಜಪಾನು ಮೇಲು

ಕೋಲಂಬಿಯೂ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಶಾಲೆಯ ಪ್ರಿನ್ಸ್‌ಪಾಲರಾದ ಮೆ. ಕಾರ್ಲ್ ಡಬ್ಲ್ಯು. ಅಕರ್ಮನ್ ಇವರು ಕಾನಡಾ, ಜಪಾನ್, ಚೈನಾ, ಫಿಲಿಪಾಯಿನ್, ಮಲಯೂಳ ಸ್ಟೇಟ್ಸ್, ಹಿಂದೂಸ್ಥಾನ, ಈಜಿಪ್ಟ್ ಮತ್ತು ಇಟೆಲಿಗಳಲ್ಲಿ ಸಂಚಾರ ಮಾಡಿದ್ದು ಈಗ 'ಪತ್ರಿಕೋದ್ಯಮದ ಸ್ವಾತಂತ್ರ್ಯ' ಈ ವಿಷಯದ ಮೇಲೆ ಪ್ಯಾರಿಸಿನಲ್ಲಿ ಭಾಷಣ ಮಾಡುತ್ತಿರುವರು. ಇವರು ತಮ್ಮ ಭಾಷಣದಲ್ಲಿ 'ಜಪಾನು ಪತ್ರಿಕಾಕರ್ತರು ಅಮೇರಿಕಾದವರಿಗಿಂತಲೂ ಮೇಲು' ಎಂದು ಅಭಿಪ್ರಾಯಪಟ್ಟಿರುವರು.

—ooo—

ಹರಿಜನ ಸೇವಕ ಸಂಘ.

ಅಖಿಲ ಭಾರತ ಹರಿಜನ ಸೇವಾ ಸಂಘದ ಕಾರ್ಯಕಾರಿ ಮಂಡಳಿಯ ಸಭೆಯೊಂದು ಶ್ರೀ. ಬಿರ್ಲಾರವರ ಅಧ್ಯಕ್ಷತೆಯಲ್ಲಿ ಹೊಸ ಡಿಲ್ಲಿಯಲ್ಲಿ ಜರಗಿತು. ಹರಿಜನ ಸೇವೆಗಾಗಿ, ಕುಟ್ಟೇಕಿನಲ್ಲಿ ಒಂದು ಔದ್ಯೋಗಿಕ ಶಾಲೆಯನ್ನು ಸ್ಥಾಪಿಸಬೇಕೆಂದೂ, ಅಸ್ವಾಮಿನಲ್ಲಿ ಹರಿಜನ ಸೇವಾಕಾರ್ಯಕ್ಕಾಗಿ ರೂ. 4262 ವ್ಯಯಿಸಬೇಕೆಂದೂ, ರೂ. 500 ನ್ನು ಲಾಹೋರಿನ ಒಂದು ಹರಿಜನ ಸಂಸ್ಥೆಗೆ ಕೊಡಬೇಕೆಂದೂ, ಅಸ್ಪೃಶ್ಯತಾನಿವಾರಣೆಗಾಗಿ ವಾಲ್ ಪೋಷ್ಟರುಗಳನ್ನು ಮುದ್ರಿಸಲು ರೂ. 1000 ವನ್ನು ವ್ಯಯಿಸಬೇಕಾಗಿಯೂ, ಮೈಸೂರಿನಲ್ಲಿ ಆರು ತಿಂಗಳ ಸಮಯದಲ್ಲಿ 50 ಹರಿಜ ಭಜನೆ ಮಂದಿರಗಳನ್ನು ಕಟ್ಟಿಸಬೇಕೆಂದೂ ಇವೇ ಮೊದಲಾದ ಹರಿಜನ ಸೇವೆಯ ಕುರಿತಾದ ಠರಾವುಗಳು ಮಂಜೂರಾದವು.

—ooo—

ಕಲ್ಕತ್ತಾ ನಗರ ಸಭೆಯೂ ಮುಸ್ಲಿಮ್ ಬಂಧುಗಳೂ.

ಕೆಲ ಸಮಯದ ಹಿಂದೆ ಮುಸ್ಲಿಮರಿಗೆ ನಗರ ಸಭೆಯ ಉದ್ಯೋಗಗಳಲ್ಲಿ ಪ್ರಾತಿನಿಧ್ಯ ಸಿಕ್ಕುವ ವಿಚಾರದಲ್ಲಿ ಕೆಲವು ಮುಸ್ಲಿಮ್ ಸದಸ್ಯರು ತಮ್ಮ ಸದಸ್ಯತನಕ್ಕೆ ರಾಜಿನಾಮೆವಿತ್ತಿದ್ದರು. ಈಗ ಅಲ್ಲಿನ ನಗರ ಸಭೆಯ ಸದಸ್ಯತನಕ್ಕೆ ಚುನಾವಣೆಯು ನಡೆಯುತ್ತದೆ ಬಹಳ ಗದ್ದಲವೂ ನಡೆಯುತ್ತದೆ. ಮುಸ್ಲಿಮರು ತಮ್ಮ ಸಲಹೆಗಳಿಗೆ ಯೋಗ್ಯ ಮನ್ನಣೆ ದೊರಕದುದರಿಂದ ಚುನಾವಣೆಯಲ್ಲಿ ಭಾಗವಹಿಸದೆ, ಅದಕ್ಕೆ ಬಹಿಷ್ಕಾರಮಾಡಬೇಕಾಗಿ ನಿರ್ಧಾರಮಾಡಿರುವರು. ಆ ಕುರಿತು ಬಹಳ ಚಳವಳ ನಡೆಯುತ್ತದೆ.

—ooo—

ಭಾರತ ಮಂತ್ರಿಗಳ ಮೇಲೆ ದಾವ.

ಸಾತಾರ ಮುನಿಸಿಪಾಲಿಟಿಯವರು ವಿಲಾಯತಿಯಲ್ಲಿಯ ಭಾರತ ಮಂತ್ರಿಗಳ ಮೇಲೆ ಒಂದು ದಾವ ಮಾಡಿದ್ದರು. ತಮಗೆ ಸರಕಾರದಿಂದ ಶಿಕ್ಷಣಕ್ಕಾಗಿ ಬರತಕ್ಕ ಸಹಾಯ ದ್ರವ್ಯ ಮತ್ತು ಅದರಲ್ಲಿ 4, 193 ರೂಪಾಯಿ ಬರತಕ್ಕ ಹಣದ ಬಗ್ಗೆ ಸತಾರ ಮುನ್ಸೀಫರ ಮುಂದೆ ವಿಚಾರಣೆ ನಡೆಯಿತು ಒತ್ತಾಯದ ಮತ್ತು ಮೂಫಿಯ ಪ್ರಾಥಮಿಕ ಶಿಕ್ಷಣಕ್ಕೆ ಕೊಡತಕ್ಕ ಸಹಾಯ ದ್ರವ್ಯದೊಳಗೆ ಕಡಮೆ ಮಾಡಲು ಸರಕಾರದವರಿಗೆ ಅಧಿಕಾರ ಇಲ್ಲವೆಂದೂ ಅವರು ಆ ಸಹಾಯವನ್ನು ಕೊಟ್ಟೇ ತೀರಬೇಕೆಂದೂ ಕೋರ್ಟು ತೀರ್ಪು ಕೊಟ್ಟಿರುವರೆಂದು ಪ್ರಕಟವಾಗಿದೆ.

—ooo—

ಎಲ್ಲರೂ ಕಾಂಗ್ರೆಸ್ಸಿಗೆ ಹೊಂದಿದವರೇ.

ಮುಂಬಯಿ ಸರಕಾರದವರು ಅಹಮದಾಬಾದ ಮುನ್ಸಿಪಾಲಿಟಿಯ ಅಧ್ಯಕ್ಷರಿಗೆ ಮುನ್ಸಿಪಾಟಿಯಲ್ಲಿ ಕಾಂಗ್ರೆಸ್ಸಿಗೆ ಹೊಂದಿದವರೆಷ್ಟು ಜನ ಸಭಾಸದರಿರುವರೆಂಬ ಬಗ್ಗೆ ಕೇಳಿದ್ದರು. ಅದಕ್ಕೆ ಅಧ್ಯಕ್ಷರು ಉತ್ತರವಾಗಿ, ಕೇಳಿದ ಮಾಹಿತಿಯನ್ನು ಕೊಡಲು ನಿರಾಕರಿಸಿ, ಕೆಳಗಿನಂತೆ ಉತ್ತರ ಕೊಟ್ಟಿರುವರು.

'ಮುನ್ಸಿಪಲ್ ಆಫೀಸಿನಲ್ಲಿ ಇಂಥ ಮಾಹಿತಿಯು ಸಿಗಲು ಸಾಧ್ಯವಿಲ್ಲ. ಅದಕ್ಕಾಗಿ ನಾನು ಬಹಳ ವ್ಯಸನಪಡುತ್ತೇನೆ ಮುನ್ಸಿಪಾಲಿಟಿಯ ಎಲ್ಲ ಸಭಾಸದರ ನಂಬಿಗೆ ಹಾಗೂ ಅವರ ರಾಜಕಾರಣ ಇವುಗಳನ್ನು ಶೋಧಿಸಿ ತೆಗೆಯಲು ನನಗೆ ಶಕ್ಯವಿಲ್ಲ ಮುನ್ಸಿಪಾಲಿಟಿಯಲ್ಲಿಯ ಅವರ ಕೃತಿಗಳ ಮೇಲಿಂದ ನನಗೆ ತಿಳಿದ ಮಟ್ಟಿಗೆ ವಿಚಾರ ಮಾಡದರೆ ಎಲ್ಲರೂ ಕಾಂಗ್ರೆಸ್ಸಿಗೆ ಹೊಂದಿದವರೇ.'

—ooo—

ಕ್ವೆಟ್ಟದಲ್ಲಿ ವಿಪರೀತ ವೆಚ್ಚ.

ಶ್ರೀಯುತ ಸತ್ಯಮೂರ್ತಿಯವರು.

ಕ್ವೆಟ್ಟದಲ್ಲಿ ಅನವ್ರಯ ವೆಚ್ಚವಾಯಿತೆಂದು ಸೂಚಿಸುವುದಕ್ಕಾಗಿ ಶ್ರೀ. ಸತ್ಯಮೂರ್ತಿಯವರು ಎಸೆಂಬ್ಲಿಯ ಮುಂದೆ ತಂದ ಕರ್ಚು ಖೋತೆಯ ಠರಾವು ಮಂಜೂರಾಯಿತು. 64 ಮಂದಿ ಠರಾವಿನ ಪರವಾಗಿಯೂ, 47 ಮಂದಿ ವಿರೋಧವಾಗಿಯೂ ಮತಕೊಟ್ಟರು

—ooo—

ಕಣ್ಣಿಲ್ಲದವರಿಗೆ ನೂತನ ಪುಸ್ತಕಗಳು.

ಕುರುಡರಾದವರ ವಿದ್ಯಾಭ್ಯಾಸ ನಡೆಸಲು ಪ್ರಪಂಚದ ವಿವಿಧ ಕಡೆಗಳಲ್ಲಿ ಉತ್ತಮಯೋಜನೆಗಳನ್ನು ಹುಡುಕುವ ಕಾರ್ಯವು ಇವತ್ತಿಗೆ ಅನೇಕ ವರ್ಷಗಳಿಂದ ನಡೆಯುತ್ತದೆ. ಸದ್ಯದಲ್ಲೇ ಮಾತಾಡುವ ವರ್ತಮಾನ ಪತ್ರಗಳಂತೆ ಪುಸ್ತಕಗಳು ಬರುವವು. ಈ ಪುಸ್ತಕವನ್ನು ಗ್ರೆಮಫೋನ್ ಉಪಕರಣದಿಂದ ಕೇಳಬಹುದು. ಈ ರೀತಿಯಲ್ಲಿ ಗ್ರೆಮಫೋನುಗಳು ವಿದ್ಯಾಭ್ಯಾಸದಲ್ಲಿ ಈಗ ಅನೇಕ ಕಡೆಗಳಲ್ಲಿ ಉಪಯೋಗವಾಗುತ್ತಿವೆ. ಮಾತಾಡುವ ಪುಸ್ತಕಗಳನ್ನು ಅಮೇರಿಕಾದಲ್ಲೂ, ಬ್ರಿಟನಿನಲ್ಲೂ ತಯಾರಿಸುತ್ತಿದ್ದಾರೆ. ಇವುಗಳು ಮೆಲ್ಲನೆ ನಡೆಯುವ ಗ್ರೆಮಫೋನು ಯಂತ್ರಗಳು. ಒಮ್ಮೆ ಮಾತಾಡಿದ ಮಾತುಗಳನ್ನು ಸರಿಯಾಗಿ ಪ್ರತಿ ಆಡಬಲ್ಲವು. ಇದರಲ್ಲಿ ಉಪಯೋಗವಾಗುವ ರಿಕಾರ್ಡು 55 ನಿಮಿಷಗಳ ತನಕ ನಡೆದು 5000 ಮಾತುಗಳನ್ನು ಆಡುವದಂತೆ.

ಇದೇ ಅಮೇರಿಕನ್ ಡಕಾಯಿತಿ!

ಈ ತರದ ಡಕಾಯಿತಿಯು ಹೆಚ್ಚಾಗಿ ಅಮೇರಿಕದಲ್ಲಿ ಮಾತ್ರ ನಡೆಯುತ್ತಿದ್ದವು. ಮೊನ್ನೆ ರಾತ್ರೆ ಮುಂಬಾಯಿಯ ಓರ್ವ ಶ್ರೀಮಂತ ಮಾರವಾಡಿ ಮನೆಯನ್ನು ಒಂದು ತೂತು ಮಾಡಿ ಕೆಲ ಮಂದಿ ಕಳ್ಳರು ಹೊಕ್ಕಿ 'ಕ್ಲೊರೊಫೊರ್ಮ್' ಉಪಯೋಗದಿಂದ ಒಳಗಿದ್ದವರನ್ನು ಪ್ರಜ್ಞೆತಪ್ಪಿಸಿ, ತನುಮಧ್ಯೆ ಬೊಬ್ಬಿಟ್ಟ ಓರ್ವ ಮುದುಕನನ್ನು ಮೃತಪಡಿಸಿ, ಮನೆಯಲ್ಲಿರುವ ಎಲ್ಲಾ ಆಭರಣ ದ್ರವ್ಯ ಇತ್ಯಾದಿಗಳನ್ನು ಹಿಡಿದು ಪಲಾಯನ ಮಾಡಿರುವರು. 'ಕ್ಲೊರೊಫೊರ್ಮಿ'ನಿಂದ ಪ್ರಜ್ಞೆತಪ್ಪಿದವರು ಬೆಳಿಗೆ ಪ್ರಜ್ಞೆ ಹೊಂದಿದವರಾಗಿ ಈ ಘಟನೆಯನ್ನು ಪೊಲೀಸರಿಗೆ ತಿಳಿಸಿರುವರು. ಪೊಲೀಸರು ಶೋಧೆ ನಡೆಯಿಸುತ್ತಿದ್ದಾರೆ.

—ooo—

ವಿದ್ಯುಚ್ಛಕ್ತಿಯನ್ನು ಧಿಕ್ಕರಿಸಿದ ಅದ್ಭುತ ಸಾಹಸ

ಮನುಷ್ಯನನ್ನು ಕೊಲ್ಲಲು, ವಿದ್ಯುಚ್ಛಕ್ತಿಗೆ 800 ವೋಲ್ಟುಗಳ ವೇಗವು ಇದ್ದರೆ ಸಾಕಾಗುತ್ತದೆ. ಆದರೆ, 400,000 ವೋಲ್ಟು ವೇಗವುಳ್ಳ ವಿದ್ಯುತ್‌ಚಕ್ತಿ ಪ್ರವಾಹವನ್ನು ತನ್ನ ದೇಹದೊಳಗೆ ಚಲಿಸುವ ಯೋಗ್ಯತೆಯುಳ್ಳ ಒಬ್ಬ ಮನುಷ್ಯನಿರುವನಂತೆ. ಈ ವಿದ್ಯುಚ್ಛಕ್ತಿ ಪ್ರವಾಹವು ಆತನ ದೇಹದಲ್ಲಿ ಚಲಿಸುತ್ತಿರುವಾಗ ಆತನ ಬೆರಳುಗಳಿಂದ ಕಿಡಿ ಹಾರುತ್ತದಂತೆ. ಆತನು ವಿದ್ಯುತ್‌ಚಕ್ತಿ ಬಲ್ಬುಗಳನ್ನು ಉರಿಸಬಲ್ಲನಂತೆ. ಆತನು ಈ ಅದ್ಭುತವನ್ನು ನಡೆಯಿಸುವ ಉಪಾಯವು ಗುಟ್ಟಾಗಿಟ್ಟಿರುತ್ತದೆ. ಆದರೆ ಆತನ ದೇಹದಿಂದ 400,000 ವೋಲ್ಟಿನ ಪ್ರವಾಹವು ಚಲಿಸುವುದು ಹಲವರು ಕಣಾರೆ ಕಂಡಿರುವರು ಈ ಅದ್ಭುತ ಕಾರ್ಯದ ಮರ್ಮವೇನಾಗಿರಬಹುದು?

—ooo—

ಲಕ್ನೋ ಕಾಂಗ್ರೆಸ್.

ಈ ಬಾರಿ ಲಕ್ನೊದಲ್ಲಿ ಜರಗಲಿರುವ ಕಾಂಗ್ರೆಸ್ಸಿಗೆ 700 ಮಂದಿ ಪ್ರತಿನಿಧಿಗಳು ಬರುವರಾಗಿ ತಿಳಿದುಬರುತ್ತದೆ. ಬಂಗಾಳದ ಕಾಂಗ್ರೆಸ್ ಕಲಹವು ಕನ್ನೂ ನಿವಾರಣೆಯಾಗದಿರುವುದರಿಂದ, ಇಲ್ಲಿ ಪ್ರಾತಿನಿಧ್ಯ ಕುರಿತು ಇನ್ನೂ ನಿರ್ಧಾರಗಳಾಗಲಿಲ್ಲ. ಮುಂಬಾಯಿಯಲ್ಲೂ ಈ ತರದ ಕಲಹವುಂಟಾಗಿತ್ತು. ಆದರೆ ಅದು ನಿವಾರಣೆಯಾಗುವುದಾಗಿ ತಿಳಿದುಬರುತ್ತದೆ. ತಮಿಳುನಾಡು. ಆಂಧ್ರದೇಶ, ಸಂಯುಕ್ತಪ್ರಾಂತ್ಯಗಳು, ಬಿಹಾರ, ಗುಜರಾತು ಈ ಪ್ರಾಂತ್ಯಗಳಿಂದ ಹೆಚ್ಚು ಪ್ರತಿನಿಧಿಗಳು ಬರುವವರಾಗಿ ತಿಳಿದುಬರುತ್ತದೆ. ಕಾಂಗ್ರೆಸ್ಸಿನಲ್ಲಿ ಆಗಬೇಕಾದ ಯಾವತ್ತು ನಿರ್ಧಾರಗಳು ಈ ಪ್ರಾಂತ್ಯಗಳ ಮೇಲೆ ಹೊಂದಿವೆ. ಈ ಬಾರಿಯ ಕಾಂಗ್ರೆಸಿನಲ್ಲಿ ಎಲ್ಲರೂ ಐಕ್ಯದಿಂದ ಕಾರ್ಯ ನಡೆಯಿಸುವರಾಗಿ ಕೆಲ ಸದಸ್ಯರು ಭರವಸೆ ಕೊಟ್ಟರುವರಾಗಿ ತಿಳಿದುಬರುತ್ತದೆ.

—ooo—

ಪೂರ್ವ ಜನ್ಮದ ಕಥೆಯನ್ನು ಹೇಳುವ ಮತ್ತೊಂದು ಹುಡಿಗೆ.

ದಿಲ್ಲಿಯ ಶಾಂತಿದೇವಿಯೆಂಬ 9 ವರ್ಷದ ಹುಡಿಗೆಯು ತನ್ನ ಹಿಂದಿನ ಜನ್ಮದ ಕಥೆಯನ್ನು ಹೇಳುತ್ತಿರುವದನ್ನು ವಾಚಕರು ಇಷ್ಟರಲ್ಲಿಯೇ ಮರೆತಿರಲಿಕ್ಕಿಲ್ಲ. ಈಗ ಅಂತಹದೇ ಮತ್ತೊಂದು ಸಂಗತಿಯು ಪೇಟಗಾರ ಎಂಬಲ್ಲಿ ಸಂಭವಿಸಿದೆ. ಅಹಿರಿ ಜಾತಿಯ (ಹಿಂದುಳಿದ) 4 ವರ್ಷದ ಭಗವತಿ ಎಂಬ ಹುಡಿಗೆಯು ತನ್ನ ಹಿಂದಿನ ಜನ್ಮದ ಕಥೆಯನ್ನು ಸಂಪೂರ್ಣವಾಗಿ ಹೇಳುತ್ತಿದೆ. ಈ ಹುಡಿಗಿಯ ಹಿಂದಿನ ಜನ್ಮದ ಹೆಸರು ಶಾಂತಿದೇವಿಯೆಂದು. ಇವಳು ಸಾಯುವ ಮುಂದೆ 2 ಗಂಡು ಮಕ್ಕಳನ್ನು ಮತ್ತು ಒಂದು ಹೆಂಣು ಮಗಳನ್ನು ಬಿಟ್ಟು ಸತ್ತಿರುವಳಂತೆ. ಅವಳ ಗಂಡನ ಮನೆಯು ಭೋಲೆಪೂರ. ಇಷ್ಟೆಲ್ಲವನ್ನು ಹೇಳುತ್ತಿದೆ.

ಈ ಹುಡಿಗಿಯನ್ನು ಭೋಲೆಪೂರಕ್ಕೆ ಕರೆದುಕೊಂಡು ಹೋಗಲು ತಾನು ಇದ್ದ ಮನೆಯನ್ನು ಮತ್ತು ಮಕ್ಕಳನ್ನು ಗುರುತು ಹಿಡಿದಳು. ಮಕ್ಕಳನ್ನು ನೋಡಿದ ಕೂಡಲೇ ಹುಡಿಗಿಯು ಒಳ್ಳೇ ಆನಂದಿತಳಾದಳು 3 ಮಕ್ಕಳೂ ದೊಡ್ಡವಾಗಿದ್ದು ಹೆಂಣು ಮಗಳಂತೂ 33 ವರ್ಷದವಳಾಗಿದ್ದು, ಅವಳು ಸ್ಕೂಲ್ ಮಾಸ್ಟರಳಾಗಿರುವಳು.

ಈ ಸಂಗತಿಯನ್ನು ಪರೀಕ್ಷೆ ಮಾಡುವದಕ್ಕೆ ಅನೇಕ ಪ್ರಶ್ನೆಗಳು ಕೇಳಲ್ಪಟ್ಟವು. ಅವೆಲ್ಲಕ್ಕೂ ಆ ಹುಡಿಗಿಯು ಸರಿಯಾಗಿ ಉತ್ತರ ಕೊಟ್ಟಳು. ಈ ಹುಡಿಗಿಯು ಈಗ ಹುಟ್ಟಿರುವ ಜಾತಿಯು ಕೀಳು ಇದ್ದು, ಅಲ್ಲಿ ಇರಲಿಕ್ಕೆ ಮನಸ್ಸಿಲ್ಲದವಳಾಗಿರುವಳು. ತನ್ನ ಹಿಂದಿನ ಮಕ್ಕಳನ್ನು ನೋಡುವದಕ್ಕೆ ಆತುರಳಾಗಿ ಭೋಲೆಪೂರದ ಹಾದಿ ಹಿಡಿದು ಒಮ್ಮೊಮ್ಮೆ ಓಡುತ್ತಿರುವಳು.

ಈ ಹುಡಿಗಿಗೆ ಹಿಂದಿನ ಜನ್ಮದಲ್ಲಿ ಸಾಯುವಾಗ 60 ವರ್ಷ ಪ್ರಾಯವಾಗಿತ್ತು. ಸತ್ತದ್ದಕ್ಕೂ ಮತ್ತು ಪುನಃ ಹುಟ್ಟಿದ್ದಕ್ಕೂ ಲೆಖ್ಖ ಹಾಕಿದರೆ 10 ತಿಂಗಳ ಅಂತರವಿರುವದು.

—ooo—

ಕರ್ಣಾಟಕದ ತರುಣರು.

ಲೇ. ಡಾ. ಯನ್. ಯಸ್. ಹರ್ಡೆಕರ್, ಹುಬ್ಬಳ್ಳಿ.

ಕರ್ಣಾಟಕವು ತನ್ನ ತರುಣರಿಗಾಗಿ ನಿಶ್ಚಯವಾಗಿಯೂ ಹೆಮ್ಮೆಪಡಬೇಕಾಗಿದೆ. ಯಾವ ಪ್ರಕಾರದಲ್ಲಿ ಹಿಂದೂಸ್ಥಾನದ ಇತರ ಪ್ರಾಂತಗಳು ಅನೇಕ ನಿಸ್ವಾರ್ಥ, ಉತ್ಸಾಹಭರಿತ, ಧೈರ್ಯಶಾಲಿಗಳಾದ ತರುಣರನ್ನು ಹಡೆದಿರುವುದೋ ಹಾಗೆಯೇ ಕರ್ಣಾಟಕವೂ ಸಹ ಹಡೆದಿದೆ. ಕಳೆದ ಎರಡು ಸತ್ಯಾಗ್ರಹದ ಸಮರಗಳಲ್ಲಿಯೂ, ಅದಕ್ಕಿಂತ ಮುಂಚಿತವಾಗಿಯೂ ಕರ್ಣಾಟಕ ಯುವಕರು ಮಿಂಚಿನ ವೇಗದಲ್ಲಿ ಕರ್ಣಾಟಕದಲ್ಲೆಲ್ಲಾ ದೇಶಭಕ್ತಿಯ ಉರಿಯನ್ನು ಹರಡಿದರು. ಆ ಯುವಕರಲ್ಲಿ ಅನೇಕರು ಮಹಾತ್ಮರ ಆಜ್ಞೆಯನ್ನು ಪರಿಪಾಲಿಸಲು ಮುಂದುಬಂದು ಯಾವ ಸಂಕೋಚವನ್ನೂ ಪ್ರಕಟಿಸದೆ ಕಾಂಗ್ರೆಸಿನ ಸೇವೆಯಲ್ಲಿ ಮಗ್ನರಾದರು. ಅವರ ಕರ್ತವ್ಯವನ್ನು ಅವರ ಶಕ್ತಿಯಾನುಸಾರವಾಗಿ ಪಾಲಿಸಿದರು. ಒಳ್ಳೇ ಮುಂದಾಳುಗಳೆಲ್ಲದೆಯೂ, ಅವರ ಕೆಲಸಗಳನ್ನು ಮೆಚ್ಚುವವರೇ ಇಲ್ಲದೆಯೂ, ಉತ್ಸಾಹವನ್ನು ಕೊಡುವವರಿಲ್ಲದೆಯೂ ಇದ್ದ ಸನ್ನಿವೇಶದಲ್ಲೂ ಕೂಡ ಕನ್ನಡ ನಾಡಿನ ಯುವಕರು ಅವರ ಕರ್ತವ್ಯವನ್ನು ದೃಢ ಸಂಕಲ್ಪದಿಂದ ಒಂದಿಷ್ಟೂ ಗೊಣಗುಟ್ಟದೆ ನಿರ್ವಹಿಸಿದರು. ಅವರು ಮಾಡಿದ ಮಹತ್ತಾದ ಸೇವೆಯು ಜನರಿಂದಲೂ, ಅವರ ಮುಖಂಡರಿಂದಲೂ ಗ್ರಾಹ್ಯವಾಗದಿದ್ದು; ನಿರ್ಲಕ್ಷಿಸಲ್ಪಟ್ಟದ್ದಾದರೂ ಸಹ ಅವರು ಅವರ ಹೊಣೆಗಾರಿಕೆಯನ್ನು ಕೊನೆಗಾಣಿಸದೆ ಬಿಡಲಿಲ್ಲ. ಅವರ ಕರ್ತವ್ಯವನ್ನು ಮುಂದೊತ್ತುತ್ತ ಯಾವ ವಿಧದ ಫಲಾಪೇಕ್ಷೆಯಿಲ್ಲದೆ ಸನ್ಮಾನಿತರಾಗಬೇಕೆಂಬ ಕಾಂಕ್ಷೆ ಇಲ್ಲದೆ ತಮ್ಮ ಸೇವೆಯನ್ನು ಪೂರ್ಣಗೊಳಿಸಿದರು. ಈ ಪ್ರಕಾರದ ಸೇವೆಯಿಂದಲೇ ಕರ್ಣಾಟಕವು ಇಂದು ಒಂದು ಪ್ರಾಂತದ ಗೌರವವನ್ನು ಪಡೆದಿದೆ. ಈ ಯುವಕರ ಸೇವೆಯಿಂದಲೇ ಕರ್ಣಾಟಕಕ್ಕೆ ಈ ಗೌರವ ಈ ಯಶಸ್ಸು ಮತ್ತು ಈ ವೈಭವವು ಲಭಿಸಿದ್ದು. ಇತರ ಪ್ರಾಂತಗಳಲ್ಲಿರುವಷ್ಟು ಇಂಥಾ ಯುವಕರು ಕರ್ಣಾಟಕದಲ್ಲಿರಲಿಕ್ಕಿಲ್ಲ. ಆದರೆ ಕರ್ಣಾಟಕವು ಈ ವಿಷಯದಲ್ಲಿ ಎಷ್ಟು ಮಾತ್ರಕ್ಕೂ ಇತರ ಪ್ರಾಂತಗಳಿಗಿಂತ ಹಿಂದುಳಿದಿರುವದಿಲ್ಲ. ಕಳೆದ ಹದಿನೈದು ವರ್ಷಗಳ ಕರ್ಣಾಟಕದ ಇತಿಹಾಸವು ಈ ವಿಷಯವನ್ನು ಸ್ಪಷ್ಟಗೊಳಿಸಿದೆ.

ಅಂದ ಮೇಲೆ, ಕಳೆದು ಹೋದ ನಮ್ಮ ನಮ್ಮ ಯಸಸ್ಸಿನ ಮೇಲೆ ನಮ್ಮ ಭವಿಷ್ಯದ ವಿಷಯಗಳನ್ನು ನಾವು ಇರಿಸಲಾಗದು. ನಿಸ್ಸಂದೇಹವಾಗಿಯೂ ಕರ್ಣಾಟಕದ ಯುವಕರು ಅಪಾರವಾದ ಸೇವೆಯನ್ನು ಮಾಡಿರುವರು. ಆದರೆ "ಇನ್ನು ಮುಂದಕ್ಕೆ ಏನು ಮಾಡಬೇಕು" ಎಂಬುದೇ ಈಗಿನ ಪ್ರಶ್ನೆ. ಕಳೆದ ಯಶಸ್ಸನ್ನು ಕಟ್ಟಿಕೊಂಡರೆ ನಮ್ಮ ಭವಿಷ್ಯವು ಯಶಸ್ಸಿಯಾಗಲಾರದು. ಕಳೆದ ಯಶಸ್ಸನ್ನೂ, ಈಗಿನ ನಮ್ಮ ಸ್ಥಿತಿಯನ್ನೂ ಒಟ್ಟುಗೂಡಿಸಿ ಸರಿಪಡಿಸಿದರೇನೇ ನಮಗೆ ಮುಂದಕ್ಕೆ ಹೀಗೆ ಮಾಡಬಹುದೆಂಬ ಕಲ್ಪನೆಯು ಹೊಳೆದು ಬರುತ್ತದೆ. ಇದಕ್ಕೆ ನಮ್ಮ ಇಂದಿನ ಸ್ಥಿತಿಯೂ ಸಹ ಗತಿಸಿದಂತೆ ಯಶಸ್ವಿಮತ್ತವಾಗಿಂಬೇಕು.

ಆದ್ದರಿಂದ ಈ ವಿಚಾರ ನೆನಪಿನಲ್ಲಿರಲಿ; ಏನೆಂದರೆ ಕರ್ಣಾಟಕದ ಕೀರ್ತಿಯನ್ನು ಬೆಳಗಿಸಿದ ಆ ಯುವಕ ಗಣವು ಇಂದು ಏತಕ್ಕೆ ನಿದ್ರಿತಾವಸ್ಥೆಯಲ್ಲಿರುವರು? ಅವರ ಆ ಕೀರ್ತಿವಂತವಾದ ಪೂರ್ವದ ಕಾರ್ಯಗಳಿಗೆ ಇಂದಿನ ಅವರ ನಿರ್ಲಕ್ಷ್ಯತಾಭಾವವು ಲಾಂಛನಾಷ್ಪದವಾಗಿಲ್ಲವೇ? ಈ ಕಟಸ್ಥಿಕಯು ಅವರ ಪ್ರಾಂತಕ್ಕೆ ದ್ರೋಹಕರವಾದದ್ದು. ಈಗ ಅವರ ತಮ್ಮ ನಿಷ್ಕಂಕಲಂಕಿತವಾದ ಕರ್ತವ್ಯದ ಶಿಖರದಿಂದ ಕ್ಷುಲ್ಲಕವಾದ ಸ್ವಾರ್ಥದ ಕೂಪಕ್ಕೆ ಇಳಿಯುತ್ತಿರುವರು. ರಾಷ್ಟ್ರೀಯ ವಿಚಾರದ ಕಾರ್ಯಗಳಲ್ಲಿ ಅವರು ತೋರುತ್ತಿರುವ ನಿರ್ಲಕ್ಷ್ಯತೆ, ಮತಾಂತರ ವಿಚಾರಗಳಲ್ಲಿ ಅವರು ಅವಲಂಬಿಸಿರುವ ಸಂಕುಚಿತ ಭಾವನೆಗಳು, ಅವರ ಜಡಸ್ವಭಾವ, ವಿಲಾಸಜೀವತದ ಕಡೆಗೆ ಇರುವ ಅವರ ಮೋಹ ಮುಂತಾದವುಗಳು ಅವನತಿಯ ಚಿಹ್ನೆಗಳಾಗಿವೆ, ಇವು ಕರ್ಣಾಟಕ ಯುವಕರಿಗೆ ಭೂಷಣವಲ್ಲ. ಕರ್ಣಾಟಕವು ಅತೀ ಮುಂದುತರಿದ ಪ್ರಾಂತವಾಗಬೇಕಾದಲ್ಲಿ ಅದರ ಯುವಕರು ಕಣ್ದೆರೆದು ಅವರ ಪ್ರಾಂತವನ್ನು ಉಚ್ಛತರದ ಪ್ರಾಂತವನ್ನಾಗಿ ಮಾಡಲು ಉದ್ಯಮಿಸಬೇಕು. ಅವರು ಯಾವ ಕಷ್ಟಗಳಿಗೂ ಎದೆಗುಂದದೆ ಸತತ ಪ್ರಯತ್ನಿಸದಿದ್ದಲ್ಲು ಈ ಕಾರ್ಯವು ಆಗುವಂತಿಲ್ಲ. ಹಾಗೆ ಮಾಡಿದರೇನೇ ಕರ್ಣಾಟಕ ತರುಣರು ತಮ್ಮ ಕರ್ತವ್ಯವನ್ನು ಪಾಲಿಸಿದಂತಾಗುವದು.

ಈಗಿನ ರಾಜಕೀಯ ವಾತಾವರಣವೂ ಮತ್ತು ಸನ್ನಿವೇಶಗಳೂ ಅನೇಕ ವೀರ ತರುಣರಿಗೆ ಅವರ ನಿಜತ್ವವನ್ನು ವ್ಯಕ್ತಗೊಳಿಸಲು ಪ್ರತಿಕೂಲವಿರುವದೆಂಬದನ್ನು ನಾನೂ ಅರಿತಿರುವೆನು. ಆದರೆ ಆ ಸನ್ನಿವೇಶಗಳನ್ನು ತನ್ನ ಉತ್ಸಾಹಕ್ಕನುಗುಣವಾಗಿ ಮಾರ್ಪಡಿಸಲು ಯಾರೂ ಹಿಂದುಳಿಯಬಾರದು. ಅದಕ್ಕಾಗಿ ಏನನ್ನೂ ಗಮನಿಸದೆ ಮುಂದು ಸಾಗಬೇಕು. ಈಗಿನ ಈ ಮಂದ, ಈ ಬಂಧಿತ ವಾತಾವರಣವನ್ನು ಅಂತ್ಯಗೊಳಿಸಿ ನಮ್ಮ ಕರ್ತವ್ಯಪಾಲನೆಗೆ ಅನುಗುಣವಾದ ವಾತಾವರಣವನ್ನುಂಟುಮಾಡುವದು ಮಾನವ ಶಕ್ತಿಯನ್ನು ಮೀರಿದ್ದಲ್ಲ ಚೆನ್ನಾಗಿ ಪರ್ಯಾಲೋಚಿಸಿದ್ದಲ್ಲು ಇದನ್ನು ಖಂಡಿತವಾಗಿಯೂ ಮಾರ್ಪಡಿಸಬಹುದು. ಕರ್ಣಾಟಕದ ಯುವಜನರು ಈ ವಿಷಯದ ಆಲೋಚನೆಯನ್ನು ಮಾಡಬೇಕು. ಈ ವರೆಗೆ ಮಾಡದಿದ್ದಲ್ಲಿ ಈಗಲಾದರೂ ಮಾಡಿ ಪೂರ್ವದ ಕೀರ್ತಿಯನ್ನುಳಿಸಬೇಕು. ಇದೇನು ಅವರಿಗಸಾಧ್ಯವಾದದ್ದೆ?

ಇಂಡಿಯೂ ಸರಕಾರದ ಪ್ರಕಟಣೆ.

ಹೊಸ ಡಿಲ್ಲಿ 27 ನೇ ಫೆಬ್ರವರಿ 36.

ಹಿಂದೂಸ್ಥಾನದಿಂದ ಹಿಂದೀಯರು ಅಪಾರ ಸಂಖ್ಯೆಯಲ್ಲಿ ಬ್ರಿಟಿಷ್ ಮಲಯಾಕ್ಕೆ ಉದ್ಯೋಗಕ್ಕಾಗಿ ಹೋಗುತ್ತಿರುವರೆಂಬದು ಸರಕಾರದ ದೃಷ್ಟಿಗೆ ಬಂದಿದೆ. ಅಲ್ಲಿಗೆ ಹೋದವರನೇಕರು ಅಲ್ಲೇ ಉದ್ಯೋಗ ಸಿಗದೆ ಕಷ್ಟಪಡುತ್ತಿರುವರು ಆದ್ದರಿಂದ ಅಲ್ಲಿಯ ಸ್ಥಳೀಯ ಅಧಿಕಾರಿಗಳು ಅಂಥವರಿಗೆ ಅಲ್ಲಿ ಕೆಲಸ ಸಿಗುವ ಸಂಭವವಿದೆಯೋ, ಅಂಥವರಿಗೆ ಅಲ್ಲಿ ಕೆಲವು ತಿಂಗಳ ಜೀವನ ನಡೆಸುವಷ್ಟು ಹಣವಿದೆಯೋ ಯಾ ಅಂಥವರಿಗೆ ಅಲ್ಲಿ ಯಾರಾದರೂ ಸಂಬಂಧಿಕರು, ಸ್ನೇಹಿತರಿರುವರೋ ಎಂಬೀ ವಿಚಾರಗಳ ತನಿಖೆಮಾಡಿ ಆ ಬಗ್ಗೆ ತಕ್ಕ ರುಜುವಾತಿಲ್ಲದವರನ್ನು 'ಪ್ರಯಾಣಿಕರ ನಿರ್ಬಂಧದ 169ನೇ ವಿಶೇಷ ಕಾನೂನಿನ 9 ನೇ ಪ್ರಕರಣದ ಪ್ರಕಾರ ಅವರನ್ನು ಹಿಂದಕ್ಕೆ ಅವರ ದೇಶದ ಒಳಿಯ ಬಂದರುಗಳಿಗೆ ವಾಪಾಸು ಕಳುಹಿಸುತ್ತಿರುವರು. ಆದ್ದರಿಂದ ಇನ್ನು ಮುಂದಕ್ಕೆ ಬ್ರಿಟಿಷ್ ಮಲಯಾಕ್ಕೆ ಹೋಗುವವರು ಅಲ್ಲಿ ಅವರಿಗೆ ಕೆಲಸ ದೊರೆತಿರುವ ಆರ್ಡರುಗಳನ್ನಾಗಲೀ ಯಾ ಅಲ್ಲಿ ಜೀವನ ನಡೆಸುವಷ್ಟು ದ್ರವ್ಯ ತಮ್ಮಲ್ಲಿದೆ ಎಂಬದನ್ನಾಗಲೀ ರುಜುವಾತುಪಡಿಸದಿದ್ದಲ್ಲಿ ಅವರನ್ನು ಆ ದೇಶಕ್ಕೆ ಪ್ರವೇಶಿಸಲು ಬಿಡದೆ ಹಿಂತಿರುಗಿಸಲಾಗುವದೆಂದು ಈ ಮೂಲಕ ಎಲ್ಲರಿಗೂ ಎಚ್ಚರಿಸಲಾಗಿದೆ.

ಪ್ರಕಟಣೆ.

ಪೊನ್ನಂಪೇಟೆನಾಡು ಭದ್ರಗೊಳ ಗ್ರಾಮದಲ್ಲಿ ವಾಸವಿರುವ ಕಂಜಿತಂಡ ಕಾರ್ಯಪ್ಪನವರ ಪತ್ನಿ ದೇಚವ್ವನು ಈ ಮೂಲಕ ತಿಳಿಯಪಡಿಸುವುದೇನಂದರೆ:—

ನನ್ನ ಪತಿಯರಾದ ಮೆ. ಕಂಜಿತಂಡ ಕಾರ್ಯಪ್ಪನವರು ಅವರ ಆಸ್ತಿಯನ್ನು ಪರಾಧೀನಪಡಿಸುವ ಉದ್ದೇಶದಲ್ಲಿರುತ್ತಾರೆ. ಆ ಪ್ರಕಾರ ಅವರಿಗೆ ಪರಾಧೀನಪಡಿಸುವ ಅಧಿಕಾರವಿರುವದಿಲ್ಲವಾದ್ದರಿಂದ ಅದನ್ನು ಯಾರಾದರೂ ಕ್ರಯಕ್ಕಾಗಲೀ ಭೋಗ್ಯಕ್ಕಾಗಲೀ ಯಾ ಗಿರ್ವಿಗಾಗಲೀ ಪಡಕೊಂಡಲ್ಲು ಆ ಸಂಬಂಧದ ಸಕಲ ನಷ್ಟಕ್ಕೂ, ಕಷ್ಟಕ್ಕೂ ಅವರೇ ಹೊಣೆಯಾಗಬೇಕಾಗುವದೆಂಬುದು ಈ ಮೂಲಕ ತಿಳಿಯಪಡಿಸಲಾಗಿದೆ.

ತಾ. 2[illegible]—3—36 ಕೆ. ದೇಚವ್ವ.
2—1

ಪ್ರಕಟಣೆ.

ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘ.

ವೀರಶೈವ ಮಹಾ ಜನಗಳಲ್ಲಿ ವಿನಂತಿ.

ತಾರೀಕು 12—4—36 ನೇ ಭಾನುವಾರ ಬೆಳಿಗ್ಯೆ ಕೊಡಗು ವೀರಶೈವ ವಿದ್ಯಾಭಿವೃದ್ಧಿ ಸಂಘದ 6 ನೇ ವಾರ್ಷಿಕ ಜನರಲ್ ಮೀಟಿಂಗನ್ನು ದಿವಾನ್ ಬಹದ್ದೂರ್ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲು ಶನಿವಾರಸಂತೆ ಗಡುಗಳೆ ಜಯದೇವ ಬಾಣೆಯಲ್ಲು ನಡೆಸಲು ಏರ್ಪಡಿಸಿರುವುದರಿಂದ ಎಲ್ಲಾ ವೀರಶೈವ ಮಹನೀಯರುಗಳು ಆ ದಿವಸ ದಯಮಾಡಿಸಬೇಕಾಗಿ ಈ ಮೂಲಕ ಕೇಳಿಕೊಳ್ಳೋಣಾಗಿದೆ. ಮೇಲ್ಕಂಡ ಸಂಘಕ್ಕೆ ಒಂದು ರೂಪಾಯಿ ಮೇಲ್ಪಟ್ಟು ವಂತಿಗೆ ಕೊಟ್ಟ ಪ್ರತಿಯೊಬ್ಬ ಮಹನೀಯರಿಗೂ ಮೀಟಿಂಗಿನಲ್ಲಿ ಮಾತನಾಡಲು ಮತ್ತು ಓಟು ಕೊಡಲಿಕ್ಕೆ ಹಕ್ಕು ಇರುತ್ತದೆ. ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳನ್ನು ಸಿ. ಹೆಚ್. ಜಿ. ಕಾಳೇಗೌಡರು ಪ್ರೆಸಿಡೆಂಟರು ಶನಿವಾರಸಂತೆ ಇವರಿಗೆ ತಾ. 10—4—36ರ ವಳಗೆ ತಲಪುವಂತೆ ಕಳುಹಿಸಿಕೊಡಬೇಕಾಗಿ ಕೇಳಿಕೊಳ್ಳೋಣಾಗಿದೆ. ಸದರಿ ದಿವಸ ಮೀಟಿಂಗಿಗೆ ಬರುವ ಎಲ್ಲಾ ಮಹನೀಯರುಗಳಿಗೆ ಊಟದ ಏರ್ಪಾಡು ಸಹ ಮಾಡಲ್ಪಡುತ್ತೆ.

ಶನಿವಾರಸಂತೆ, ಸಿ. ಹೆಚ್. ಜಿ. ಕಾಳೇಗೌಡ,
ತಾ. 26—3—36. ಪ್ರೆಸಿಡೆಂಟ್, ವೀರಶೈವ ವಿದ್ಯಾಭಿವೃದ್ಧಿ ಸಂಘ
2—1

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿಮೂರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ ಈ ಸಂಸ್ಥೆಯಲಿ ತಪ್ಪದೆ ವಿಮೆಯನ್ನಿಳಿಸಿ.

ಮೊದಲನೇ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮೂಪತ್ರದ ಮೇಲೆ,—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮೂಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ.

(52—6)

ಸುಂಟಿಕೊಪ್ಪ ಏಜೆಂಟರು—
ಏ. ಎಸ್. ಮಾಚಯ್ಯನವರು,
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಕೊಡಗು

ಮೂರ್ತಿ ತಾ. ೩ನೇ ಶುಕ್ರವಾರ ೧೯೩೬.

ಗಂಧದ ಬೋನಸ್ಸು ನಿಬಂಧನೆಗಳ ತಿದ್ದು ಪಡಿಗಳು.

ರೈತರ ಅನ್‌ರಿಡೀಮ್ಡ್ ಜಾಗದಲ್ಲಿರುವ ಗಂಧದ ಮರಗಳಿಗೆ ಬೋನಸು ಕೊಡುವುದನ್ನು ಕುರಿತು ಚೀಫ್ ಕಮಿಷನರವರು ಪ್ರಕಟಿಸಿದ ಕರಡು ನಿಬಂಧನೆಗಳ ವಿಷಯ ಈ ವೊದಲು ಒಂದೆರಡು ಸಾರಿ ಬರೆದದ್ದಾಯಿತು. ಈ ಬಗ್ಗೆ ದೇಶದ ಹಲವು ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ನೆರೆದು ಜನರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾಯಿತು. ನ್ಯಾಯವಿಧಾಯಕ ಸಭೆಯಲ್ಲಿಯೂ ಚರ್ಚಿಸಿದ್ದಾಯಿತು. ಆದರೂ ಕೂಡ ಸರ್ಕಾರದವರು ಈ ವಿಚಾರವಾಗಿ ತಮ್ಮ ಧ್ಯೇಯವನ್ನು ಬದಲಾಯಿಸದೆ ಇರುವುದು ಶೋಚನೀಯವಾಗಿದೆ. ಸರ್ಕಾರದವರು ಜನರ ಅಪೇಕ್ಷೆಯ ಮೇರೆ ಕರಡು ನಿಬಂಧನೆಗಳನ್ನು ಕನ್ನಡದಲ್ಲಿ ಪ್ರಕಟಿಸಿ, ಆಕ್ಷೇಪಣೆ ಯೂ ತಿದ್ದು ಪಡಿಗಳನ್ನು ಕಳುಹಿಸುವ ಅವಧಿಯು 1935 ನೇ ಸೆಪ್ಟೆಂಬರು ಅಖೈರು ವರೆಗೆ ಇದ್ದದನ್ನು 1936 ನೇ ಮೂರ್ತಿ 31 ರ ವರೆಗೆ ಮುಂದರಿಸಿದರು; ಆದರೆ ಸಾರ್ವಜನಿಕ ಸಭೆಗಳ ಮತ್ತು ನ್ಯಾಯವಿಧಾಯಕ ಸಭೆಯವರ ಕೋರಿಕೆಯಂತೆ, ಈ ನಿಬಂಧನೆಗಳು ಗಂಧದ ಮರಗಳನ್ನು ಬೆಳೆಸುವ ಜನರಿಗೆ ಒಪ್ಪಿಗೆಯೂಗುವಂತೆ ತಿದ್ದುಪಡಿ ಮಾಡಲಿಕ್ಕಾಗಿ ಜನರ ಪ್ರತಿನಿಧಿ ಮೆಂಬರುಗಳ ಬಹುಮತವಿರುವ ಮತ್ತು ದೇಶದ ಎಲ್ಲಾ ಭಾಗಗಳಲ್ಲಿ ಸುತ್ತಿ ಜನರ ಅಭಿಪ್ರಾಯ ತೆಗೆಯುವಂಥ ಕಮಿಟಿಯೊಂದನ್ನು ಏರ್ಪಡಿಸುವುದಕ್ಕೆ ಅಧಿಕಾರಿಗಳು ಏನೊಂದೂ ಗಮನ ಕೊಡದೆ ಇರುವುದು ತುಂಬಾ ಅಶ್ಚರ್ಯಕರವಾಗಿದೆ.

ಸರ್ಕಾರದವರ ಈ ತರಹದ ವರ್ತನೆಯನ್ನು ನೋಡಿ ಸಹಿಸಲಾರದೆ ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರು, ಮೇಲೆ ಸೂಚಿಸಿದಂಥ ಕಮಿಟಿಯ ಅವಶ್ಯಕತೆಯನ್ನು ಅಧಿಕಾರಿಗಳಿಗೆ ಮಂದಟ್ಟು ಮಾಡಲಿಕ್ಕಾಗಿ ಕಮಿಷನರವರಲ್ಲಿಗೆ ಕಳೆದ ಕವುನ್ಸಿಲು ವಿಟಿಂಗಿಗೆ ಮುಂಚಿತವಾಗಿ ಒಂದು ಡೆಪ್ಯುಟೇಶನ್ ಕಳುಹಿಸಲು ನಿಶ್ಚಯಿಸಿದರು. ಆದರೆ ಕವುನ್ಸಿಲು ವಿಟಿಂಗಿನಲ್ಲಿ ಈ ವಿಷಯ ಚರ್ಚೆಗಿರುವ ಕಾರಣ ಆ ವಿಟಿಂಗಿಗೆ ಮುಂಚಿತವಾಗಿ ಡೆಪ್ಯುಟೇಶನಿಗೆ ಭೇಟಿ ಕೊಡುವುದರಿಂದ ಪ್ರಯೋಜನವಾಗಲಾರದೆಂದು ಕಮಿಷನರ ಉತ್ತರ ಬಂತು. ನ್ಯಾಯವಿಧಾಯಕ ಸಭೆಯ ವಿಟಿಂಗಿನಲ್ಲಿ ಇಂಥಾ ಕಮಿಟಿಯ ನೇಮಕಕ್ಕೆ ಸರ್ಕಾರಿ ಮೆಂಬರರು ಒಪ್ಪಲಿಲ್ಲ. ಆದುದರಿಂದ ಡೆಪ್ಯುಟೇಶನಿನ ಭೇಟಿಗೆ ಅವಕಾಶ ಕೊಡಬೇಕೆಂದು ಪುನಹ ಕೇಳಿಕೊಳ್ಳಲಾಯಿತು. ಡೆಲ್ಲಿಗೆ ವರ್ಗವಾಗಿ ಹೋಗುವ ಅವಸರದಲ್ಲಿದ್ದ ಹಳೇ ಕಮಿಷನರವರು ಸಂಭಾಷಣೆಗೆ ಎಡೆ ಕೊಡಲು ಸಾಧ್ಯವಿಲ್ಲವೆಂದುಬಿಟ್ಟರು. ಆಕ್ಷೇಪಣೆಗಳನ್ನು ಕಳುಹಿಸಲು ನಿಶ್ಚಯಿಸಿದ್ದ ಅವಧಿಯು ಸವಿಾಪಿಸುತ್ತಾ ಬಂದದ್ದರಿಂದ ಡೆಪ್ಯುಟೇಶನಿನವರು ಬೇರೆ ದಾರಿಯೇನೂ ತೋಚದ ತಮಗೆ ಯುಕ್ತವೆಂದು ತೋರಿದ ತಿದ್ದುಪಡಿಗಳನ್ನು ಬರೆದು ಚೀಫ್ ಕಮಿಷನರವರಿಗೆ ಕಳುಹಿಸಿರುವರು. ಅವುಗಳನ್ನು ವಿವರವಾಗಿ ಇನ್ನೊಂದು ಕಡೆ ಕೊಡಲಾಗಿದೆ.

ಸರ್ಕಾರದವರು ಕಾದಿಟ್ಟ ಕಾಡುಗಳಲ್ಲಿ ನೆಟ್ಟು, ಪೋಷಣೆ ಮಾಡಿದ ಗಂಧದ ಗಿಡಗಳು ಅಷ್ಟೊಂದು ಚೆನ್ನಾಗಿ ಬೆಳೆಯುವುದಿಲ್ಲವೆಂದೂ, ರೈತರ ಖಾಸಗಿ ಜಾಗಗಳಲ್ಲಿ ಸ್ವಾಭಾವಿಕವಾಗಿ ಹುಟ್ಟಿ ಬೆಳೆಯುವಂಥ ಮರಗಳೇ ಚೆನ್ನಾಗಿರುವವೆಂದೂ ಕಂಡುಬಂದಿರುವುದರಿಂದ ಸರ್ಕಾರದ ಗಂಧದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳಲು ರೈತರ ಜಾಗಗಳಲ್ಲಿ ಹುಟ್ಟಿ ಬೆಳೆಯುವ ಮರಗಳನ್ನು ಚೆನ್ನಾಗಿ ನೋಡಿಕೊಳ್ಳುವಂತೆ ಅವರಿಗೆ ಉತ್ತೇಜನ ಕೊಡಲಿಕ್ಕಾಗಿ ಅವರ ಜಾಗದ ಗಂಧದ ಮರಗಳಿಗೆ ಬೋನಸು ಕೊಡಲು ನಿಶ್ಚಯಿಸಿರುವದಾಗಿದೆ. ಆದುದರಿಂದ ಇದನ್ನು ಕುರಿತ ನಿಬಂಧನೆಗಳು ರೈತರ ಮೇಲೆ ನಿರ್ಬಂಧಗಳಾಗಿ ಪರಿಣಮಿಸದೆ, ಗಂಧ ಬೆಳೆಸಲು ಅವರಿಗೆ ಪ್ರೋತ್ಸಾಹನ್ನೀಯುವಂಥವಾಗಿರಬೇಕು. ಆದಕಾರಣವೇ ಅವು ಜನರಿಗೆ ಒಪ್ಪುವಂಥವಾಗಿರಬೇಕೆಂದು ಒತ್ತಿ ಹೇಳುವದಾಗಿದೆ. ಸರ್ಕಾರದವರು ಇದನ್ನು ಗಮನಿಸದೆ ಬೇರೆ ಖಾನೂನುಗಳನ್ನು ಅಧಿಕಾರಪೂರ್ವಕವಾಗಿ ಜಾರಿಗೆ ತರುವಂತೆ ಇವನ್ನೂ ಜಾರಿಗೆ ತರಲು ಯತ್ನಿಸಿದರೆ ಬೋನಸು ಕೊಡಲು ನಿರ್ಧರಿಸಿರುವ ಉದ್ದೇಶವನ್ನೇ ಸೋಲಿಸಿದಂತಾಗುವುದರಲ್ಲಿ ಸಂಶಯವಿಲ್ಲ.

ಆದುದರಿಂದ ಜಮೀನ್ದಾರರ ಸಂಘದ ಡೆಪ್ಯುಟೇಶನಿನವರು ಖಾಸಗಿ ಜಾಗದ ಮೂಲೀಕರ ಮೇಲೆ ನಿರ್ಬಂಧವಾಗಿ ಪರಿಣಮಿಸುವ ನಿಬಂಧನೆಗಳನ್ನು ತೆಗೆದು ಹಾಕಬೇಕೆಂದು ಸೂಚಿಸಿರುವದು ನ್ಯಾಯವಾಗಿದೆ. ಗಂಧದ ಮರವನ್ನು ಕೂಕರ ಮೇರೆ ಮೂರುವುದರಿಂದ, ತೂಕದ ಮೇರೆಯೇ ಬೋನಸ್ಸನ್ನೂ ಕೊಡುವುದು ಯೋಗ್ಯವಾಗಿದೆ. ರಿಡೀಮ್ಡ್ ಜಾಗದ ಮೂಲೀಕರಿಗೆ ಮರದ ಬೆಲೆಯ ಶೇಕಡ 75 ರಷ್ಟು ಕೊಡುವುದು ತೂಕದ ಮೇರೆಯೂಗಿದೆ ಈ ವಿಚಾರದಲ್ಲಿ ರಿಡೀಮ್ಡ್ ಮತ್ತು ಅನ್‌ರಿಡೀಮ್ಡ್ ಜಾಗಗಳ ಮೂಲೀಕರುಗಳಿಗೆ ಬೇರೆ ಬೇರೆ ನಿಬಂಧನೆಗಳನ್ನಿಡುವುದರಲ್ಲಿ ಅರ್ಥವಿಲ್ಲ. 50—60 ವರ್ಷಗಳ ವರೆಗೆ ಎಚ್ಚರಿಕೆ ತೆಗೆದುಕೊಳ್ಳಬೇಕಾದ ಗಂಧದ ಮರದ ಬೆಲೆಯಲ್ಲಿ ಶೇಕಡ 60 ರಷ್ಟಾದರೂ ಜಾಗದ ಮೂಲೀಕನಿಗೆ ಕೊಡದೆ ಹೋದರೆ ಅವನಿಗೆ ಸಾಕಷ್ಟು ಉತ್ತೇಜನ ಕೊಟ್ಟಂತಾಗುವುದಿಲ್ಲ. ಮೂಕ್ಯವಾಗಿ ಈ ನಿಬಂಧನೆಗಳನ್ನು ಕಡೆನೆ ಜಾರಿಗೆ ತರಬೇಕು; ಜಾಗೆ ಜಾರಿಗೆ ತಂದ ಕೂಡಲೇ ರೈತರ ಜಾಗದಲ್ಲಿರುವ ಎಲ್ಲಾ ಮರಗಳಿಗೂ ಬೋನಸು ಕೊಡತಕ್ಕದ್ದು. ಸತ್ತ ಮರಗಳನ್ನೇ ತೆಗೆಯುವುದು ಉತ್ತಮವಾದ ನಿಯಮ. ಇಲ್ಲವಾದರೆ ಮುಂದಿನ ಜನರಂಗದ ಉತ್ಪತ್ತಿಯನ್ನು ಈಗಲೇ ಉಪಯೋಗಿಸಿದಂತಾಗುವುದು. ಇದು ಎಂದೂ ನ್ಯಾಯವಲ್ಲ. ಸರ್ಕಾರದವರು ರೈತರ ಜಾಗದಿಂದ ತೆಗೆದುಕೊಂಡು ಹೋಗುವ ಮರಗಳಿಗೆಲ್ಲಾ ಬೋನಸು ಕೊಡಬೇಕೆನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಜಮೀನ್ದಾರರ ಸಂಘದ ಡೆಪ್ಯುಟೇಶನಿನವರು ಸೂಚಿಸಿರುವ ತಿದ್ದು ಪಡಿಗಳು ರೈತರ ಹಿತದ ದೃಷ್ಟಿಯಿಂದ ತೃಪ್ತಿಕರವಾಗಿವೆ. ಆದುದರಿಂದಲೇ ಈಗಾಗಲೇ ಹಲವು ಕಡೆ ಪಬ್ಲಿಕ್ ವಿಟಿಂಗುಗಳು ನಡೆದು ಈ ತಿದ್ದು ಪಡಿಗಳಿಗೆ ಜನರು ಒತ್ತಾಸೆ ಕೊಟ್ಟಿರುವುದಾಗಿದೆ. ಡೆಪ್ಯುಟೇಶನಿನವರು ಚೀಫ್ ಕಮಿಷನರವರಿಗೆ ಬರೆದಿರುವ ಪತ್ರದಲ್ಲಿ ಹೇಳಿರುವಂತೆ ಜನರ ಕೋರಿಕೆಯ ಮೇರೆ ತಿದ್ದುಪಡಿಮಾಡಲಿಕ್ಕಾಗಿ ಒಂದು ಕಮಿಟಿಯನ್ನು ನೇಮಿಸಲು ಇನ್ನೂ ತಡವಾಗಿಲ್ಲ. ಇದು ಅಸಾಧ್ಯವೆಂದು ಚೀಫ್ ಕಮಿಷನರಿಗೆ ತೋರಿದರೆ ಜಮೀನ್ದಾರರ ಸಂಘದವರು ಕಳುಹಿಸಿರುವ ಮತ್ತು ದೇಶದ ಜನರ ಒತ್ತಾಸೆಯನ್ನಿತ್ತಿರುವ ತಿದ್ದುಪಡಿಗಳನ್ನಾದರೂ ಅವರು ಸಂಪೂರ್ಣವಾಗಿ ಅಂಗೀಕರಿಸುವರೆಂಬ ಆಶೆಯುತ್ತೇವೆ. ಇಲ್ಲವಾದರೆ ಚೀಫ್ ಕಮಿಷನರವರು ಜನರ ಅಭಿಪ್ರಾಯಗಳನ್ನು ಲಕ್ಷಿಸದೆ ತಮ್ಮ ಮನಸೋ ಇಚ್ಛೆ ಆಡಳಿತನ ಡಿಸಲಿಚ್ಛಿಸುವರೆಂಬುದು ವಿಷದವಾಗುವುದು.

ಸಾರ್ವಜನಿಕ ಸಭೆಗಳು.

ಗಂಧದ ಬೋನಸನ್ನು ಕುರಿತ ನಿಬಂಧನೆಗಳು.

ಶನಿವಾರಸಂತೆ ಸಭೆ.

ಮೂರ್ತಿ ತಾರೀಕು 21ರಲ್ಲಿ ಶನಿವಾರಸಂತೆಯಲ್ಲಿ ಗಂಧದ ಮರದ ಬೋನಸು ಸಂಬಂಧದ ಕರಡು ನಿಬಂಧನೆಗಳನ್ನು ಕುರಿತು ಚರ್ಚಿಸಲು ಒಂದು ಪಬ್ಲಿಕ್ ವಿಟಿಂಗು ನಡೆಯಿತು. ಮೆ. ಬಸವಂಣಯ್ಯನವರು ಅಧ್ಯಕ್ಷರಾಗಿದ್ದರು.

ಮೆ. ಮುಳ್ಳೂರು ಈರೇಗೌಡರು ಸಭೆಯಲ್ಲಿ ಈ ಕೆಳಗೆ ಕಂಡಂತೆ ವಿಷಯವನ್ನೆಲ್ಲಾ ವಿವರಿಸಿದರು

1935ನೇ ಜುಲೈ ತಿಂಗಳಿನ ಕೊಡಗು ಗಜೆಟ್ಟಿನಲ್ಲಿ ರೈತರ ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವ ಬಗ್ಗೆ ಜಾರಿಗೆ ತರಬೇಕೆಂದಿರುವ ಕರಡು ರೂಲ್ಸ್‌ಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಪಡಿಸಲಾಗಿತ್ತು. ಸದರಿ ವಿಷಯದಲ್ಲಿ ದೇಶದ ಅಭಿಪ್ರಾಯವನ್ನು ಸರ್ಕಾರದ ಮುಂದಿಡಲು ಶನಿವಾರಸಂತೆ, ಕೊಡ್ಲಿಪೇಟೆ, ಸೋಮವಾರಪೇಟೆ ಮತ್ತು ಇನ್ನೂ ಇತರ ಕಡೆಗಳಲ್ಲಿ ಸಾರ್ವಜನಿಕ ವಿಟಿಂಗು ನಡೆಯಿಸಿ, ಸದರಿ ರೂಲ್ಸ್‌ಗಳನ್ನು ದೇಶಭಾಷೆಯಲ್ಲಿ ಪ್ರಕಟಪಡಿಸದಿದ್ದುದಕ್ಕಾಗಿ ಅತೃಪ್ತಿಯನ್ನು ತೋರಿಸಲಾಗಿ ಇನ್ನೊಂದು ತಿಂಗಳ ಗಜೆಟ್ಟಿನಲ್ಲಿ ಸದರಿ ರೂಲ್ಸ್‌ಗಳನ್ನು ಕನ್ನಡದಲ್ಲಿ ಪ್ರಕಟಪಡಿಸಿದ್ದಲ್ಲದೆ ಆ ವಿಷಯ ಆಕ್ಷೇಪಣೆ ಯೂ ಸಲ್ಲಿಸಲು 1926ನೇ ಮೂರ್ತಿ ಅಂತ್ಯದ ವರೆಗೂ ಅವಧಿಯನ್ನು ಕೊಟ್ಟರು. ಈ ಮಧ್ಯೆ ಕೊಡಗು ಕೌನ್ಸಿಲಿನ ಫೆಬ್ರವರಿ ಅಧಿವೇಶನ ಸೇರುವುದಕ್ಕೆ ಸ್ವಲ್ಪ ಮುಂಚೆ ದೇಶದ ಪ್ರತಿನಿಧಿಯೂದ ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರು ಈ ರೂಲ್ಸ್‌ಗಳ ವಿಷಯದಲ್ಲಿ ಸಲಹೆಗಳನ್ನು ಮುಂದಿಡಲು ಕೊಡಗು ಕಮಿಷನರ್ ಸಾಹೇಬರಲ್ಲಿಗೆ ಒಂದು ಡೆಪ್ಯುಟೇಶನ್ ಹೋಗಬೇಕೆಂತಲೂ, ಆ ಡೆಪ್ಯುಟೇಶನಿಗೆ ಸಮಯ ದೊರಕಿಸಿಕೊಡಬೇಕೆಂದೂ ಕಮಿಷನರ್ ಸಾಹೇಬರವರನ್ನು ಕೇಳಿಕೊಂಡರು. ಈ ಕೌನ್ಸಿಲು ಅಧಿವೇಶನವು ಮುಗಿಯುವ ವರೆಗೂ ಸಮಯವಾಗುವುದಿಲ್ಲವೆಂದೂ, ಮತ್ತು ಡೆಪ್ಯುಟೇಶನ್ ಪ್ರಯೋಜನವಿಲ್ಲವೆಂದೂ ಕಾರ್ಯಕಾರಿ ಮಂಡಳಿಯವರಿಗೆ ಜವಾಬು ಸಿಕ್ಕಿತು ಈಗ ಕವುನ್ಸಿಲ್ ಅಧಿವೇಶನವೂ ಮುಗಿಯಿತು. ಆದ್ದರಿಂದ ಈಗಲಾದರೂ ಸದರಿ ರೂಲ್ಸ್‌ಗಳ ವಿಷಯದಲ್ಲಿ ರೈತನಿಗನುಕೂಲವಾಗುವ ಸಲಹೆಗಳನ್ನು ಸರ್ಕಾರದವರ ಮುಂದಿಟ್ಟು ರೈತನಿಗೆ ಅವಶ್ಯಕರವಾದ ಯಾವ ರೂಲ್ಸ್‌ಗಳೂ ಜಾರಿಗೆ ಬಾರದಂತೆ ಮಾಡಲು ಮತ್ತು ರೈತರಿಗೆ ಸಹಜವಾದ ಪ್ರಯೋಜನ ದೊರೆಯುವಂತೆ ಮಾಡುವುದಕ್ಕೂ ಅವಶ್ಯವಾದ ಕಾರ್ಯಕಲಾಪಗಳನ್ನು ಕೈಕೊಂಡು ಕೆಲಸ ನಡೆಸಬೇಕಾಗಿ ಕೊಡಗು ಜಮೀನ್ದಾರರ ಸಂಘಕ್ಕೆ ಅಧಿಕಾರ ಕೊಡುವುದಕ್ಕೋಸ್ಕರ ಈ ದಿನ ಈ ಸಭೆಯು ಇಲ್ಲಿ ಕೂಡಿದ್ದಾಗಿದೆ.

ಈ ವಿಟಿಂಗಿನಲ್ಲಿ ಪಾಸಾದ ತರಾವುಗಳು

1. ಗಂಧದ ಮರಗಳಿಗೆ ಬೋನಸ್ಸು ಕೊಡುವ ಬಗ್ಗೆ ವ್ಯಕಟಪಡಿಸಿರುವ ಕರಡು ರೂಲ್ಸುಗಳ ವಿಷಯದಲ್ಲಿ, ಈ ಕೆಳಗಿನ ಕೆಲವು ಸಲಹೆಗಳನ್ನು ಮತ್ತು ದೇಶದ ರೈತನಿಗೆ ಉಪಯುಕ್ತವಾದ ಇತರ ಸಲಹೆಗಳನ್ನು ಸರಕಾರದ ಮುಂದಿಟ್ಟು ಕರಡು ರೂಲ್ಸುಗಳಿಂದ ರೈತನಿಗೆ ಉಂಟಾಗುವ ಯಾವ ಕಷ್ಟವನ್ನೂ ತಪ್ಪಿಸಲು ಅವಶ್ಯವಾದ ಕಾರ್ಯಗಳನ್ನು ಕೈಗೊಂಡು ನಡೆಸಲು, ಈ ಸಭೆಯು ದೇಶದ ಪ್ರತಿನಿಧಿಯೂದ ಕೊಡಗು ಜಮೀನ್ದಾರರ ಸಂಘಕ್ಕೆ ಅಧಿಕಾರ ಕೊಡುತ್ತದೆ.

ಸಲಹೆಗಳು:—

(I) ಯಾವ ತಾರತಮ್ಯವೂ ಇಡದೆ ಕಿತ್ತ ಮರಗಳಿಗೆ ಶೇಕಡ 60% ರಂತೆ ಬೋನಸ್ಸು ಕೊಡಬೇಕು.

(II) ಗಂಧದ ಮರವನ್ನು ಕಾವಾಡುವ ಬಗ್ಗೆ ರೈತನಿಗೆ ಯಾವ ನಿರ್ಬಂಧವೂ ಇರಕೂಡದು.

(III) ಗಂಧದ ಮರಗಳಿಗೆ ಅನಿರೀಕ್ಷಿತವಾದ ಯಾವದೇ ತರಹ ಅವಘಾತ ಸಂಭವಿಸಿದರೂ ಅದಕ್ಕೆ ರೈತನನ್ನು ಜವಾಬ್ದಾರಿ ಮಾಡಕೂಡದು

2. ಈ ವಿಷಯಕ್ಕಾಗಿ ಕೊ. ಜಮೀನುದಾರ ಸಂಘದ ವಿಶೇಷ ಮಹಾಸಭೆಯೊಂದನ್ನು ಕೂಡಲೇ ಸೇರಿಸಬೇಕಾಗಿ ಈ ಸಭೆಯು ಸಂಘವನ್ನು ಕೇಳಿಕೊಳ್ಳುತ್ತದೆ.

3 ಈ ವಿಟಿಂಗಿನ ನಡವಳಿಕೆಗಳನ್ನು ದೇಶೀಯ ಪತ್ರಿಕೆಗಳಲ್ಲಿ ಪ್ರಕಟಪಡಿಸಬೇಕಾಗಿ ಈ ಸಭೆಯು ಸಂಘವನ್ನು ಕೇಳಿಕೊಳ್ಳುತ್ತದೆ.

ಕೊಡ್ಲಿಪೇಟೆಯ ವಿಟಿಂಗು.

ಮೂರ್ತಿ ತಾರೀಕು 22 ರಲ್ಲಿ ಕೊಡ್ಲಿಪೇಟೆಯ ಬಸವೇಶ್ವರ ದೇವಸ್ಥಾನದಲ್ಲಿ ಊರುಮತಸ್ಥ ಶಾಂತವೀರ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ಉದ್ದೇಶಕ್ಕಾಗಿ ಒಂದು ಸಭೆಯು ಸೇರಿತ್ತು. ಮೆ. ಸಿದ್ದಬಸಪ್ಪನವರು ಸಭೆ ಕೂಡಿದ ಉದ್ದೇಶವನ್ನು (ಮೇಲಿನ ವಿಟಿಂಗಿನಂತೆಯೇ) ವಿವರಿಸಿದರು. ಶನಿವಾರಸಂತೆಯ ವಿಟಿಂಗಿನಲ್ಲಿ ಪಾಸಾದ ತರಾವುಗಳೇ ಈ ವಿಟಿಂಗಿನಲ್ಲೂ ಸರ್ವಾನುಮತದಿಂದ ಪಾಸಾದವು.

ಗೋಣಿಕೊಪ್ಪಲು ಸಭೆ.

ಈ ಕಳೆದ ತಾ. 29 ನೇ ಆದಿತ್ಯವಾರ ಗೋಣಿಕೊಪ್ಪಲ್ಲು ಒಂದು ಪಬ್ಲಿಕ್ ವಿಟಿಂಗು ಸೇರಿತು. ಮು. ರಾ. ಮನೆಯಪಂಡ ಪೂವಯ್ಯನವರು ಅಧ್ಯಕ್ಷಸ್ಥಾನಕ್ಕೆ ಆರಿಸಲ್ಪಟ್ಟರು. ಮೆ. ಪಿ ವಿ. ಬೆಳ್ಯಪ್ಪನವರು ವಿಟಿಂಗಿನ ಉದ್ದಿಶ್ಯವನ್ನು ವಿವರಿಸಿ, ಜಮೀನ್ದಾರರ ಸಂಘದ ಡೆಪ್ಯುಟೇಶನಿನವರು ಗಂಧದ ಬೋನಸ್ಸಿನ ಕರಡು ರೂಲ್ಸುಗಳಲ್ಲಿ ಚೀಫ್ ಕಮಿಷನರವರಿಗೆ ಕಳುಹಿಸಿದ ತಿದ್ದು ಪಡಿಗಳನ್ನು ಓದಿ ಹೇಳಿದರು. ಮೆ. ಚೆಪ್ಪುಡಿರ ಪೊನ್ನಪ್ಪನವರು ಇದಕ್ಕೆ ಒತ್ತಾಸೆಯಾಗಿ ಮಾತಾಡಿದರು. ನಂತರ ಈ ಕೆಳಗಿನ ತರಾವುಗಳು ಸರ್ವಸಮ್ಮತದಿಂದ ಪಾಸಾದವು.

1. 'ಜಮೀನ್ದಾರರ ಸಂಘದ ಡೆಪ್ಯುಟೇಶನಿನವರು ಗಂಧದ ಬೋನಸು ಕರಡು ನಿಬಂಧನೆಗಳನ್ನು ಕುರಿತು ಚೀಫ್ ಕಮಿಷನರವರಿಗೆ ಕಳುಹಿಸಿರುವ ತಿದ್ದು ಪಡಿಗಳಿಗೆ ಈ ಸಭೆಯವರು ಸಂಪೂರ್ಣ ಒತ್ತಾಸೆಯನ್ನೀಯುತ್ತಾರೆ.'

2. 'ಗಂಧದ ಬೋನಸು ರೂಲುಗಳ ತಿದ್ದು ಪಡಿಯು ಸಂಬಂಧವಾಗಿ ಯುಕ್ತ ತೋರಿದ ರೀತಿಯಲ್ಲಿ ವರ್ತಿಸಲು ಜಮೀನ್ದಾರರ ಸಂಘಕ್ಕೆ ಈ ಸಭೆಯು ಸಂಪೂರ್ಣ ಅಧಿಕಾರವನ್ನು ಕೊಡುತ್ತದೆ.'

ವೀರಾಜಪೇಟೆ ವಿಟಿಂಗು.

ಈ ಸಂಬಂಧ ವೀರಾಜಪೇಟೆಯಲ್ಲಿ ಈ ತಾ. 1ನೇ ಬುಧವಾರ ಸಾರ್ವಜನಿಕ ಸಭೆಯು ನೆರೆಯಿತು. ಮೆ. ಚೆಪ್ಪುಡಿರ ದೇವಯ್ಯನವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಜಮೀನ್ದಾರರ ಸಂಘದ ಪ್ರೆಸಿಡೆಂಟರಾದ ಮೆ. ಪಿ ಐ. ಬೆಳ್ಯಪ್ಪನವರು ಸಭೆ ಕೂಡಿಸಿದ್ದರ ಉದ್ದಿಶ್ಯವನ್ನು ಹೇಳಿ, ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳ ಬೋನಸ್ಸಿನ ಕರಡು ರೂಲ್ಸುಗಳನ್ನು ಓದುತ್ತಾ ಬಂದರು. ಇವರೊಂದಿಗೆ ಜ. ಸಂಘದ ಕಾರ್ಯದರ್ಶಿಯವರಾದ ಮೆ. ಐ. ಪಿ. ಕಾರ್ಯಪ್ಪನವರು ಡೆಪ್ಯುಟೇಶನಿನವರು ಚೀಫ್ ಕಮಿಷನರಿಗೆ ಕಳುಹಿಸಿದ ಬದಲಾವಣೆಗಳನ್ನು ಓದಿ ವಿವರಿಸಿದರು. ಅನಂತರ ಮೇಲೆ ಸೂಚಿಸಿದಂಥ (ಗೋಣಿಕೊಪ್ಪಲು ವಿಟಿಂಗಿನ) ಗೊತ್ತುವಳಿಗಳು ಸಭೆಯು ಮುಂದಿಡಲಾದವು ಇವೆಂಡು ತರಾವುಗಳೂ ಏಕ ಮತದಿಂದ ಮಂಜೂರಾದವು. ಅಧ್ಯಕ್ಷರಿಗೆ ವಂದನೆಗಳಿಂದ ಸಭೆಯು ಅಂತ್ಯವಾಯಿತು.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ ಹಿಲ್ಲ್ ರೋಡಿನಲ್ಲಿ ಈ ವಾರ ಪ್ಲೇಗು ಇಲಿಗಳು ಸತ್ತವೆಂದು ವರ್ತಮಾನ.

ಕೊಡಗು ಚೀಫ್ ಕಮಿಶನರವರು ಈ ತಾ. 15ರಲ್ಲಿ ಬೆಂಗಳೂರಿನಿಂದ ಮಡಿಕೇರಿಗೆ ಬರುವರೆಂದು ವರ್ತಮಾನವಿದೆ.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಯೊಂದಕ್ಕೆ ರೂ. 40 ಮತ್ತು ಮಡಿಕೇರಿಯಲ್ಲಿ ಕಾಫಿ ಖಾಡಿಗೆ ರೂ. 114 ಕ್ರಯವಿತ್ತೆಂದು ತಿಳಿಯಬರುತ್ತದೆ.

ಕೊಡಗು ಜೇನು ಮತ್ತು ಮೇಣ ಸಹಕಾರಿ ಸಂಘದ ಆಫೀಸು ಕಳೆದ ತಾ. 29ರಲ್ಲಿ ವೀರಾಜಪೇಟೆಯಲ್ಲಿ ಪೂಜೆ ಸಮೇತ ತೆರೆಯಲ್ಪಟಿತು

ಮಡಿಕೇರಿ ಸರ್ಕಲಿನ ಎಕ್ಸೈಸ್ ಸಬ್ ಇನ್‌ಸ್ಪೆಕ್ಟರ್ ಮೆ. ಕೋದಂಡ ನಾಣಯ್ಯನವರು ರಜೆ ತೀರಿ ಈ ತಾ. 1 ರಲ್ಲಿ ಕೆಲಸಕ್ಕೆ ಸೇರಿರುವರು

ಪೊನ್ನಪ್ಪಸಂತೆಯಲ್ಲಿ ದನಗಳು, ತರ್ಕಾರಿ, ಕೈಗಾರಿಕೆ ಸಾಮಾನು ವಗೈರೆಗಳ ಪ್ರದರ್ಶನವು ಈ ತಾ. 23 ರಿಂದ 25 ರ ವರೆಗೆ ನಡೆಯಲಿಕ್ಕಿದೆಯೆಂದು ತಿಳಿಯಬರುತ್ತದೆ.

ದಕ್ಷಿಣ ಕೊಡಗಿನ ಸಹಕಾರಿ ದವಸ ಸ್ಟೋರಿನವರು ಒಂದು ಶಾಖೆಯಾಗಿ ಒಂದು ಬಟ್ಟೆ ಅಂಗಡಿಯನ್ನು ವೀರಾಜಪೇಟೆಯಲ್ಲಿ ಕಳೆದ ತಾ. 25 ರಲ್ಲಿ ತೆರೆದಿರುವರು

ಕಳೆದ ತಾ. 30ರಲ್ಲಿ ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಜನರಲ್ ಮೀಟಿಂಗು ಕಮಿಷನರವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆಯಿತಾಗಿ ತಿಳಿಯುತ್ತೇವೆ.

ಜಾರ್ಜ್ ಚಕ್ರವರ್ತಿಯವರ ಸಿಲ್ವರ್ ಜುಬಿಲಿ ಫಂಡಿನಿಂದ ಕೊಡಗಿಗೆ ಸಿಕ್ಕಿದ 4000 ರೂಪಾಯಿಗಳಲ್ಲಿ ರೂ. 3000 ಮಡಿಕೇರಿ ಆಸ್ಪತ್ರೆಯಲ್ಲಿ ವಿದ್ಯುಚ್ಛಕ್ತಿ ದೀಪ ಇಡಲು ಉಪಯೋಗಿಸಲ್ಪಡುವದೆಂದು ಸುದ್ದಿ ಇದೆ.

ಕೊಳ್ಳೆದಾಳು ಚೇರಂಬಾಣೆ ಸಿದ್ಧಾಶ್ರಮದಲ್ಲಿ ಈ ತಾ. 13 ರಲ್ಲಿ ಸಪ್ತಾಹ ಪ್ರಾರಂಭವಾಗಿ, ನಿತ್ಯ ಅನ್ನ ಸಂತರ್ಪಣೆ, ಬ್ರಹ್ಮ ಜಿಜ್ಞಾಸ, ಅಹೋರಾತ್ರಿ ಭಜನೆ, ಕೀರ್ತನೆ ಮುಂತಾದವು ತಾ. 20 ರ ವರೆಗೆ ನಡಿಸಲ್ಪಡುವದೆಂದು ತಿಳಿಯುತ್ತೇವೆ.

ಕಳೆದ ತಾ. 31ರ ರಾತ್ರಿ ವೀರಾಜಪೇಟೆ ಮುನ್ಸಿಪಾಲಿಟಿಯ ಪ್ರೆಸಿಡೆಂಟರಾದ ಮೆ. ತಿರುವೆಂಗಡಂ ಪಿಳ್ಳೆಯವರ 2ನೇ ಪುತ್ರ, ಸೆಕೆಂಡ್ ಫಾರಮ್ಮಿನ ವಿದ್ಯಾರ್ಥಿ ದೇವರಾಜನು ಅವರ ಬಾವಿಗೆ ಬಿದ್ದು ಆತ್ಮಹತ್ಯ ಮಾಡಿಕೊಂಡನೆಂದು ತಿಳಿಯುತ್ತೇವೆ.

ವೀರಾಜಪೇಟೆ ಹೈಸ್ಕೂಲಿನಲ್ಲಿ ಎಗ್ರಿಕಲ್ಚರ್ ಡೆಮಾನ್‌ಸ್ಟ್ರೇಟರಾಗಿರುವ ಮೆ. ಮುಂಡಂಡ ಪೊನ್ನಪ್ಪನವರು ಮತ್ತು ಸಹಕಾರಿ ಸ್ಟೋರುಗಳ ಸುಪರ್‌ವೈಜರಾಗಿದ್ದ ಮೆ. ಕಲಿಯಂಡ ಸೋಮಯ್ಯನವರು ಈ ತಾ. 1ರಿಂದ ಸಹಕಾರಿ ಇನ್ಸ್‌ಪೆಕ್ಟರುಗಳಾಗಿ ನೇಮಿಸಲ್ಪಟಿರುವರು.

ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ ಖಾಲಿಯಾಗಿರುವ ಪೊನ್ನಂಪೇಟೆ—ಶ್ರೀಮಂಗಲನಾಡುಗಳ ಜಮ್ಮ ಮೆಂಬರುತನಕ್ಕೆ ಮೆ ಪಿ. ಜಿ. ಮುದ್ದಮ್ಮಯ್ಯನವರು ಮತ್ತು ಮೆ. ಪುಚ್ಚಿಮಾಡ ಮಾದಯ್ಯನವರು ಉಮೇದುವಾರರಾಗಿ ನಿಂತಿರುವರೆಂದು ತಿಳಿಯುತ್ತೇವೆ.

ಫ್ರೇಜರ್‌ಪೇಟೆ—ಸೋಮವಾರಪೇಟೆ ರಸ್ತೆಯ 6/1ರ ಸೇತುವೆಯನ್ನು ಈ ತಾ. 4ರಿಂದ 30ರ ವರೆಗೆ ರಿಪೇರಿ ಮಾಡುವುದರಿಂದ ವೈವಾಟಿಗೆ ಬೇರೆ ರಸ್ತೆ ಇಲ್ಲದ ಕಾರಣ ಆ ಸೇತುವೆಯ ಮೇಲೆಯೇ ಮೋಟಾರು ವಗೈರೆ ವಾಹನಗಳು ನಿಧಾನವಾಗಿ ದಾಟಲ ಬಿಡಲಾಗುವದೆಂದು ಪ್ರಕಟವಾಗಿದೆ.

ಈ ವಾರವೂ ದೇಶದ ಹಲವು ಭಾಗಗಳಿಗೆ ಮಳೆ ಬಿದ್ದಿದೆ. ಮಡಿಕೇರಿಗೂ ಒಳ್ಳೇ ಮಳೆಯಾಯಿತು. ಎರಡು ವಾರಗಳ ಮಳೆಯಿಂದ ದೇಶದಲ್ಲೆಲ್ಲಾ ಕಾಫಿ ಹೂ ಬಿಡಲಿಕ್ಕೆ ಬಹಳ ಅನುಕೂಲವಾಯಿತೆಂದೂ, ಈ ವರ್ಷ ಒಳ್ಳೇ ಕಾಫಿ ಫಸಲು ದೊರೆಯಬಹುದೆಂದೂ ಕಾಫಿ ಪ್ಲಾಂಟರುಗಳ ಅಂದಾಜೆಂದು ತಿಳಿಯಬರುತ್ತದೆ.

ದಕ್ಷಿಣ ಕೊಡಗಿನ ಸುಭೇದಾರರಾದ ಮೆ ಕೋಡಿರ ಉತ್ತಪ್ಪನವರು ಈ ತಾ. 9ರಿಂದ ಒಂದು ತಿಂಗಳ ವರೆಗೆ ಟೆಂಟೋರಿಯಲ್ ಪಟಲಾಮಿನ ತಂಬೇತಿಗೆ ಹೋಗುವುದರಿಂದ ಅವರ ಬದಲಿಗೆ ತಾತ್ಕಾಲಿಕ ಸುಭೇದಾರರಾಗಿ ಸಬ್ ಜಡ್ಜ್ ಕೋರ್ಟಿನ ಶಿರಸ್ತೇದಾರರಾದ ಮೆ. ಕೀತಿಯಂಡ ಬೆಳ್ಯಪ್ಪನವರು ನೇಮಿಸಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ಕಳೆದ ಹುತ್ರಿ ಹಬ್ಬದಲ್ಲಿ ನಡೆದ ಚೊಟ್ಟಮಾಡ ಗಣಪತ್ತಿಯವರ ಖೂನಿ ಕೇಸನ್ನು ಸುಬೇದಾರ ಮೇಜಿಸ್ಟ್ರೇಟರು ವಿಚಾರಿಸಿ ಸೆಷನ್ಸ್ ಕೋರ್ಟಿನ ವಿಚಾರಕ್ಕೆ ಗುರಿಪಡಿಸಿರುವರು. ಸೆಷನ್ಸ್ ಕೋರ್ಟಿನಲ್ಲಿ ವಿಚಾರಣೆಯು ಈ ತಾ. 20 ರಲ್ಲಿ ಪ್ರಾರಂಭವಾಗುವದೆಂದೂ, ಅಪರಾಧಿಗಳು ಜಾಮೀನು ಮೇಲೆ ಬಿಡಲ್ಪಟ್ಟಿರುವರೆಂದೂ ತಿಳಿಯಬರುತ್ತದೆ

ಸರ್ವೆ ಆಫ್ ಇಂಡಿಯಾದ 2ನೇ ಕ್ಲಾಸಿನ 5 ಉದ್ಯೋಗಗಳಿಗಾಗಿ ಕಲ್ಕತ್ತಾ, ಬೆಂಗಳೂರು ಮತ್ತು ಡೇರಾಡನ್ನಿನಲ್ಲಿ ಸ್ಪರ್ಧೆಯ ಪರೀಕ್ಷೆಯು 1936 ನೇ ಆಗೋಸ್ತು 25 ರಲ್ಲಿ ಪ್ರಾರಂಭವಾಗುವದೆಂದೂ, 2—8—13 ರಿಂದ 1—8—17 ರ ವಳಗೆ ಹುಟ್ಟಿದವರು ಮಾತ್ರ ಕಮಿಷನರವರ ಮೂಲಕ ಚೀಫ್ ಕಮಿಷನರಿಗೆ ಬರುವ ಮೇ 1 ರೊಳಗೆ ಅಪ್ಲಿಕೇಶನ್ ಕಳುಹಿಸಬೇಕೆಂತಲೂ ಕಮಿಷನರು ತಿಳಿಸಿರುತ್ತಾರೆ.

ಸಿದ್ದಾಪುರ—ಪೊಳ್ಳೆಬೆಟ್ಟ ರಸ್ತೆಯ 3/6 ಮತ್ತು 4/6 ಸೇತುವೆಗಳ ರಿಪೇರಿಗಾಗಿ 3 ರಿಂದ 6ನೇ ಮೈಲಿನ ವರೆಗೆ ಈ ತಾ. 13 ರಿಂದ 30 ರ ವರೆಗೂ, 0/6 ಮತ್ತು 0/8 ಸೇತುವೆಗಳ ರಿಪೇರಿಗಾಗಿ 0 ರಿಂದ 3 ನೇ ಮೈಲಿನ ವರೆಗೆ ಮೇ ತಾ. 1 ರಿಂದ 14 ರ ವರೆಗೂ ವೈವಾಟಿಗೆ ಪೂರ್ತಿ ಮುಚ್ಚಲ್ಪಡುವದೆಂದು ಎಗ್ಸಿಕ್ಯುಟಿವ್ ಇಂಜಿನಿಯವರು ತಿಳಿಸಿರುತ್ತಾರೆ.

ಹಿಂದಿ ಪರೀಕ್ಷೆಯ ಫಲಿತಾಂಶ.

ಕಳೆದ ಫೆಬ್ರವರಿ ಮಾಹೆಯಲ್ಲಿ ಮಡಿಕೇರಿಯಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಈ ಕೆಳಗಿನವರು ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ.

ರಾಷ್ಟ್ರಭಾಷೆಯಲ್ಲಿ—ಸೆಕೆಂಡ್ ಕ್ಲಾಸಿನಲ್ಲಿ—(1) ಶ್ರೀಮತಿ ಟಿ. ಶಾಂತಕುಮಾರಿಯವರು, (2) ಮೆ. ಕೆ ಸುಬ್ಬಯ್ಯನವರು ಮತ್ತು (3) ಮೆ. ದಾಮೋದರ ರಾಮಚಂದ್ರ ಜೋಶಿಯವರು.

ಪ್ರಾಥಮಿಕ ಪರೀಕ್ಷೆಯಲ್ಲಿ—ಫಸ್ಟ್ ಕ್ಲಾಸಿನಲ್ಲಿ—ಶ್ರೀಮತಿಗಳಾದ (1) ಕೆ. ಯಂ. ಸೀತಮ್ಮ, (2) ಕೆ. ಎಸ್. ಪಾರ್ವತಿ, (3) ಕೆ. ಎಸ್. ವೆಂಕಟಲಕ್ಷ್ಮಿ, (4) ಕೆ. ಯಸ್. ಜಾನಕಿ, (5) ಎ. ಆರ್. ಕೌಸಲ್ಯಾಬಾಯಿ, (6) ಮೆ. ಎ. ಆರ್. ಗೋವಿಂದಸಿಂಗ್, ಮತ್ತು (7) ಮೆ ಬಿ. ಸುಬ್ರಾಯ. ಸೆಕೆಂಡ್ ಕ್ಲಾಸಿನಲ್ಲಿ—ಶ್ರೀಮತಿಗಳಾದ (8) ಕೆ. ಯಂ. ಮುತ್ತಮ್ಮ, (9) ಕೆ. ಸಿ. ಗಂಗಮ್ಮ, (10) ಜಯಲಕ್ಷ್ಮಿ, (11) ಸಿ. ವಿ. ಸಾವಿತ್ರಿ, (12) ಯಂ. ವಿ ಮಹಾಲಕ್ಷ್ಮಿ, (13) ಸಿ. ವಿ ಮೀನಾಕ್ಷಿ, ಮೆ. ಗಳಾದ (14) ಬಿ. ಯಂ. ಬಿದ್ದಯ್ಯ, (15) ಟಿ. ಯಸ್. ಶಿವರಾಮ, (16) ಕೆ. ವಿ. ಶ್ರೀನಿವಾಸನ್, ಮತ್ತು (17) ಯಂ ಯಸ್. ಕೃಷ್ಣಸಾಮಿ. ಇವರಿಗೆಲ್ಲಾ ನಮ್ಮ ಅಭಿವಂದನೆಗಳಿವೆ.

ಹಿಂದೂದೇಶ.

ಆಂಧ್ರ ವಿಶ್ವವಿದ್ಯಾಲಯದ ಹೊಸ ವೈಸ್ ಚಾನ್ಸಲರರಾಗಿ ಶ್ರೀ ಸಿ ಆರ್ ರೆಡ್ಡಿಯವರು ಚುನಾಯಿಸಲ್ಪಟ್ಟಿದ್ದಾರೆ.

ಎಸೆಂಬ್ಲಿಯಲ್ಲಿ ಅಧಿಕಾರಿಗಳಿಂದ ಶಿಫಾರಸು ಮಾಡಲಾದ ಫಾಯ್‌ನೇನ್ಸ್ ಬಿಲ್ಲು ಪಾಸಾಗಲಿಲ್ಲ. ಬಿಲ್ಲಿನ ವಿರುದ್ಧವಾಗಿ 68 ಓಟುಗಳೂ, ಪರವಾಗಿ 51 ಓಟುಗಳೂ ಇದ್ದುವು.

ಹೌರಾ ಸೇತುವೆಯ ಕಂಟ್ರಾಕ್ಟು ಇಂಡಿಯವನ್ನು ಬಿಟ್ಟು ಹೊರಗೆ ಹೋಗಬಾರದೆಂದು ಕಲ್ಕತ್ತಾ ಕಾರ್ಪರೇಶನ್ನಿನವರು ಒಂದು ಠರಾವಿನ ಮೂಲಕ ವ್ಯಕ್ತಪಡಿಸಿರುವರು.

ನಮ್ಮ ಹೊಸ ವೈಸರಾಯರು ಏಡನ್ನಿಗೆ ಇದೇ ಏಪ್ರಿಲ್ ತಾ. 12ಕ್ಕೆ ಮುಟ್ಟಿ, ಅಲ್ಲಿಂದ ಬೊಂಬಾಯಿಗೆ ಅದೇ ತಾ. 17 ಕ್ಕೆ ದಯಮಾಡುವರು. ಅಧಿಕಾರಿಗಳು ಇವರ ಸ್ವಾಗತದ ಸಿದ್ಧತೆಗಳನ್ನು ಮಾಡುತ್ತಿರುವರು.

ಎಸೆಂಬ್ಲಿಯಲ್ಲಿ ಮಂಜೂರಾಗದ ಫಾಯ್‌ನೇನ್ಸ್ ಬಿಲ್ಲಿಗೆ, ಇಂಡಿಯದ ಹಿತರಕ್ಷಣೆಯ ಹೆಸರಲ್ಲಿ, ನಮ್ಮ ವೈಸರಾಯರು ತಮ್ಮ ಸರ್ಟಿಫಿಕೇಟಿನ ಅಧಿಕಾರಬಲದಿಂದ ಪುನಃ ಜೀವದಾನ ಮಾಡಿದ್ದಾರೆ.

ಸರಕಾರದ ಎಚ್ಚರಿಕೆಯನ್ನೂ ವೀರಿ ಶ್ರೀ. ಸುಭಾಷ್ ಭೋಸರು ವಿಲಾಯಿತಿಯಿಂದ ವಿಮಾನದಲ್ಲಿ ಇಂಡಿಯಕ್ಕೆ ಬರಲು ನಿರ್ಧರಿಸಿರುವರೆಂದೂ, ಆದರೆ ಗಂಡಾಂತರಕ್ಕೆ ಒಳಗಾಗಬೇಡಿ, ಸ್ವಲ್ಪ ನಿಧಾನಿಸಿ ನೋಡಿರೆಂದು ಅವರ ಆಪ್ತರು ಉಪದೇಶಿಸಿರುವರೆಂದೂ ಪ್ರಕಟವಾಗಿದೆ.

'ನಮ್ಮ ಹೊಸ ವೈಸರಾಯರು ಗಾಂಧಿಜಿಯವರೊಡನೆ ಸಂಭಾಷಿಸಲು ಆತುರರಾಗಿದ್ದಾರೆ; ಇಂಡಿಯಕ್ಕೆ ಬಂದ ಮೇಲೆ ಅವರೊಳಗೆ 'ಹೊಸ ಸುಧಾರಣೆ' 'ಚಕ್ರವರ್ತಿಗಳ ಇಂಡಿಯದ ಸಂದರ್ಶನ'ಗಳ ಕುರಿತು ಮಾತು ಕಥೆಗಳಾಗಬಹುದು'. ಎಂದು ಪ್ರಕಟವಾದ ವಾರ್ತೆ ಸುಳ್ಳೆಂದು ತಿಳಿಯಲಾಗಿದೆ.

ಇದೇ ತಿಂಗಳು ತಾರೀಕು 25 ರಲ್ಲು ಜಗನ್‌ಮೋಹನ ಪ್ಯಾಲೆಸಿನಲ್ಲಿ ಸ್ಪಷಲ್ ಕಾವೊಕೇಶನ್ ನಡೆದು ಸರ್ ಕೆ. ಪಿ. ಪುಟ್ಟಂಣ ಚೆಟ್ಟಿ ಇವರಿಗೆ ಗವುರವ ಡಾಕ್ಟರೇಟ್ ಪದವಿಯು ಕೊಡಲ್ಪಟ್ಟಿತು ಈ ಸಮಾರಂಭದಲ್ಲಿ ಶ್ರೀಮನ್ ಮಹಾರಾಜರವರು ಅಧ್ಯಕತೆ ವಹಿಸಿ 10 ನಿಮಿಷಗಳ ಕಾಲ ಸಮಯೋಚಿತ ಭಾಷಣವನ್ನು ಮಾಡಿದರು.

ಡೆಲ್ಲಿಯ ಮುನ್ಸಿಪಲ್ ಕೌನ್ಸಿಲಿನ ಕಮಿಟಿಯಲ್ಲಿ ಕವೀಂದ್ರ ಠಾಗೂರರವರಿಗೆ ಬಿನ್ನಹ ಪತ್ರ ಒಪ್ಪಿಸುವ ಕುರಿತು ಚರ್ಚೆ ನಡೆದು, ಅಧ್ಯಕ್ಷರು ರೂಲಿಂಗ್ ಕೊಟ್ಟದ್ದರಿಂದ ಅತೃಪ್ತರಾಗಿ 12 ಮಂದಿ ಸದಸ್ಯರು ಸಭೆ ಬಿಟ್ಟು ನಡೆದರು. ಅನಂತರ ಡೆಲ್ಲಿಯ ಮುಖ್ಯ ನಾಗರಿಕರು, ತಮ್ಮ ಪರವಾಗಿ ಒಂದು ಮಾನಪತ್ರವನ್ನು ಸಮರ್ಪಿಸಲು ನಿರ್ಧರಿಸಿದರು.

ನೇಪಾಳ ಸಂಸ್ಥಾನಕ್ಕೆ ಸೇರಿದ ಜೋಗ್‌ಬಾನಿ ಎಂಬ ಊರಿನ ಬಳಿ ಶಣಬಿನ ಕಾರ್ಖಾನೆಯನ್ನು ಕಟ್ಟುತ್ತಿದ್ದಾರೆ. ಕಳೆದ ವಾರ ಕೆಲಸ ನಡೆಸುತ್ತಿದ್ದಾಗ 700 ಅಡಿ ಉದ್ದವಾದ ಕಮಾನಿನಂತಿದ್ದ ವೇಲ್ಭಾವಣಿಯು ಕುಸಿದು ಬಿದ್ದು 200 ಮಂದಿ ಕೂಲಿಕಾರರು ಅದರ ಕೆಳಗೆ ಸಿಕ್ಕಿ ತೀರಿ ಹೋದರೆಂದು ಹೇಳಲಾಗಿದೆ. ಆ ಕಟ್ಟಡ ಕಟ್ಟಲು ಪ್ರತಿ ದಿನವೂ 1,500 ಮಂದಿ ಕೂಲಿಯವರನ್ನು ನೇಮಕಮಾಡಲಾಗಿತ್ತೆಂದು ತಿಳಿಯುವುದು.

ಓರಿಯಂಟಲ್ ಜೀವವಿಮಾ ಕಂಪೆನಿಯವರು 1935 ನೇ ಸಾಲಿನಲ್ಲು 8,89,89,149 ರೂಪಾಯಿಯ 48,858 ಪಾಲಿಸಿಗಳನ್ನು ಕೂಡಿಸಿರುತ್ತಾರೆ. 1934ನೇ ಸಾಲಿನಲ್ಲಿ 7,62,42,761 ರೂಪಾಯಿಯ 42,378 ಪಾಲಿಸಿಗಳನ್ನು ಕೂಡಿಸಿದ್ದರು. ಅಂದರೆ 1935ನೇ ಸಾಲಿನಲ್ಲಿ ಕಳೆದ ಸಾಲಿಗಿಂತಲೂ 1,27,46,388 ರೂಪಾಯಿಯ 6,480 ಪಾಲಿಸಿಸಿಗಳು ಹೆಚ್ಚಿರುತ್ತವೆ. ಈ ಕಂಪೆನಿಯು ಮಹಾಜನರ ಆದರ ವಿಶ್ವಾಸಗಳನ್ನು ಪಡೆದು ವರ್ಷ ವರ್ಷವೂ ಅಭಿವೃದ್ಧಿಗೆ ಬರುತ್ತಿರುವುದು ಸ್ತುತ್ಯವಾಗಿದೆ.

ಇಂಪೀರಿಯಲ್ ಇಂಡಿಯನ್ ಸಿಟಿಜನ್ ಶಿಪ್ ಸಂಘದ ಅಧ್ಯಕ್ಷರಾದ ಸರ್ ಪುರುಷೋತ್ತಮದಾಸ್ ಥಾಕುರ್‌ದಾಸರು ಹಿಂದುಸ್ಥಾನದ ಸರಕಾರದ ಅಂತರಾಷ್ಟ್ರ ಖಾತೆಯ ಸೆಕ್ರೆಟರಿಗಳಿಗೆ ಒಂದು ತಂತಿ ಕಳುಹಿಸಿರುವರು. ಅದರಲ್ಲಿ ಇಟಲಿ ವಿಮಾನಗಳು ಹಿಂದೀಯರ ಆಸ್ತಿಪಾಸ್ತಿಗಳ ಮೇಲೆ ಬಾಂಬು ಹಾಕಿರುವ ವಾರ್ತೆ ಬಂದಿರುವುದಾಗಿಯೂ, ಆ ವಿಷಯದಲ್ಲಿ ಸಂಪೂರ್ಣ ವಾರ್ತೆಯನ್ನು ಸರ್ಕಾರದವರು ತರಿಸಬೇಕೆಂದೂ, ಸರಕಾರದವರು ಹಿಂದೀಯರ ಜೀವರಕ್ಷಣೆಗೂ ಅವರ ವಸ್ತುಗಳ ರಕ್ಷಣೆಗೂ ಬೇಕಾದ ಕೆಲಸಗಳನ್ನು ಕೈಕೊಳ್ಳಬೇಕೆಂದೂ ಸೂಚಿಸಿರುವರು.

ಈಚೆಗೆ ಬಂದ ವಾರ್ತೆಗನುಸಾರವಾಗಿ ಮಹಾತ್ಮ ಗಾಂಧಿಯವರು ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ ತೆರಳುವರೆಂದು ವರ್ತಮಾನ.

ಇಂಡಿಯಾ ಕ್ರಿಕೆಟ್ ಕಂಟ್ರೋಲ್ ಬೋರ್ಡಿನವರು ಐದು ವರ್ಷಗಳಿಂದ ತಮ್ಮ ಸಂಘದ ಪೋಷಕರಾಗಿದ್ದ ಲಾರ್ಡ್ ವಿಲ್ಲಿಂಗ್‌ಡನ್‌ರವರಿಗೆ ಅವರು ವೈಸರಾಯರ ಪದವಿಯಿಂದ ನಿವೃತ್ತರಾಗಿ ಸೀಮೆಗೆ ಹೊರಟು ಹೋಗುವುದಕ್ಕೆ ಮುಂಚೆ ಅಂದರೆ ಕಳೆದ ತಾ. 30ರಲ್ಲಿ ಒಂದು ಬೆಳ್ಳಿಯ ತಟ್ಟೆಯನ್ನು ಜ್ಞಾಪಕಾರ್ಥವಾಗಿ ಕೊಟ್ಟಿರುತ್ತಾರೆ. ಆ ತಟ್ಟೆಯಲ್ಲಿ ಕ್ರಿಕೆಟ್ ಬೋರ್ಡಿನ ಮೆಂಬರುಗಳ ಪ್ರಾಂತೀಕ ಸಂಘದ ಪ್ರೆಸಿಡೆಂಟರುಗಳ ರುಜುಗಳನ್ನು ಕೆತ್ತಿಸಿರುವದಾಗಿ ತಿಳಿಯುವುದು.

ಬೊಂಬಾಯಿಯ ನ್ಯಾಯವಿಧಾಯಕ ಸಭೆಗೆ ಮೆ ಎಚ್. ಯಂ ರಹಿಮತುಲ್ಲಾಯರವರನ್ನು ಅಧ್ಯಕ್ಷರರಾಗಿ ಚುನಾವಣೆ ಮಾಡಿದ್ದಾರೆ. ಮೊದಲನೇ ಸಾರಿ ಓಟು ತೆಗೆದಾಗ ಉಮೇದುವಾರರುಗಳಾಗಿ ನಿಂತಿದ್ದ ರಾವ್ ಬಹದ್ದೂರ್ ಎನ್. ಇ. ನವಲೆಯವರಿಗೆ 49, ಮೆ. ರಹಿಮತುಲ್ಲಾರವರಿಗೆ 31, ಡಾ. ಅಂಬೇಡ್ಕರವರಿಗೆ 24 ಈ ರೀತಿ ಓಟುಗಳು ಬಂದಿದ್ದವು. ಡಾ. ಅಂಬೇಡ್ಕರವರಿಗೆ ಕಡಿಮೆ ಓಟುಗಳು ಬಂದ ಕಾರಣ ಅವರ ಹೆಸರನ್ನು ವಜಮಾಡಲಾಯಿತು. ನಂತರ ಮೆಂಬರುಗಳು ಓಟು ಮಾಡಿದಾಗ ಮೆ. ರಹಿಮತುಲ್ಲಾರವರಿಗೆ ವಿಶೇಷವಾಗಿ ಓಟುಗಳು ಬಂದು ಅವರು ಅಧ್ಯಕ್ಷರಾಗಿ ಚುನಾವಣೆಯಾದರು.

ವಿದೇಶ.

ಫ್ರೆಂಚರು ಸ್ವಿಜರ್ಲೆಂಡಿನ ಎಲ್ಲೆಕಟ್ಟಿನಿಂದ ಲಕ್ಕೆಂ ಬರ್ಗಿನ ವರೆಗೆ ಎಂದರೆ ಸುಮಾರು 250 ಮೈಲುಗಳ ದೂರ ಭೂಮಿಯನ್ನು ಕೊರೆದು ಕೋಟೆ ಕಟ್ಟಿರುವರು. ಇದು ಜರ್ಮನರು ದಾಳಿ ಇಡುವಾಗ ಅವರನ್ನು ತಡೆಯುವುದಕ್ಕೆ ಮಾಡಿದ ಕೆಲಸವಾಗಿದೆ.

ಲಂಡನಿನಲ್ಲಿ ನೌಕಾ ಸಂಧಿಗೆ ಹಲವು ದೇಶಗಳ ದಸ್ಕತು ಬಿದ್ದಿತು. ಗ್ರೇಟ್ ಬ್ರಿಟನ್, ಯುನೈಟೆಡ್ ಸ್ಟೇಟ್ಸ್, ಫ್ರಾನ್ಸ್, ಇಂಡಿಯಾ ಮೊದಲಾದುವು ಇದಕ್ಕೆ ಒಪ್ಪಿಗೆ ಕೊಟ್ಟವು. ದಕ್ಷಿಣ ಆಫ್ರಿಕವೂ, ಐರ್ಲ್ಯಾಂಡೂ ದಸ್ಕತು ಹಾಕಿಲ್ಲ. ಈ ಸಂಧಿ 6 ವರ್ಷಗಳ ಮಟ್ಟಿಗೆ.

ಗಾಬ್ರಿಯೇಲ್ ಹಕೀಂ ಎಂಬವರೊಬ್ಬರು ಹಿಂದೂ ದೇಶದ ಡಾಕ್ಟರರು. ಇವರು ಹಲವು ವರ್ಷಗಳಿಂದ ಲೆಂಕೆಸ್ಟರಿನಲ್ಲಿ ನೆಲಸಿದ್ದು ಒಬ್ಬ ಯುರೋಪೀಯ ಹೆಂಗಸನ್ನು ಮದುವೆಯಾಗಿದ್ದರು. ಈಗ ಅವರು ತಮ್ಮ ಹೆಂಡತಿಯನ್ನು ಕೊಂದ ಆರೋಪಕ್ಕೆ ಗುರಿಯಾಗಿ, ಮರಣದಂಡನೆಗೊಳಗಾಗಿರುವರು.

ಎಂಪೈರ್ ಸೊಸೈಟಿಗಳೆಲ್ಲರೂ ಕಳೆದ ವಾರ ಲಂಡನ್ ಪಟ್ಟಣದಲ್ಲಿ ಒಟ್ಟಾಗಿ ಕಲೆತು ಮುಂದೆ ಇಂಡಿಯಾ ದೇಶಕ್ಕೆ ವೈಸರಾಯರಾಗಿ ಬರುವ ಲಾರ್ಡ್ ಲಿನ್‌ಲಿತ್ ಗೋರವರನ್ನೂ, ಅವರ ಪತ್ನಿಯವರನ್ನೂ ಬರಮಾಡಿಕೊಂಡು ಇಂಡಿಯಾ ಸ್ಟೇಟ್ ಸೆಕ್ರೆಟರಿ ಲಾರ್ಡ್ ಜೆಟ್ಲೆಂಡ್‌ರವರ ಅಧ್ಯಕ್ಷತೆಯಲ್ಲಿ ದಿವ್ಯವಾದ ಔತಣವನ್ನೇರ್ಪಡಿಸಿ ಸತ್ಕರಿಸಿದರು.

ಆಸ್ಟ್ರೇಲಿಯಾ, ಹುಗೇರಿ, ಇಟಲಿ ರಾಜ್ಯಗಳ ಪ್ರತಿನಿಧಿಗಳು ಕಳೆದ ವಾರ ರೋಮ್ ನಗರದಲ್ಲಿ ಕುಳಿತು ಆಲೋಚಿಸಿ ಹಲವು ವರ್ಷಗಳ ವರೆಗೆ ನಡೆದು ಬರುವಂತೆ ಒಂದು ಒಪ್ಪಂದವನ್ನು ಮಾಡಿಕೊಂಡಿರುತ್ತಾರೆ. ಎಲ್ಲಾ ಪ್ರಾಮುಖ್ಯ ವಿಷಯಗಳನ್ನೂ ಮೂರು ರಾಜ್ಯದವರೂ ಸೇರಿ ಇತ್ಯರ್ಥ ಮಾಡಿ ಅದರಂತೆ ವರ್ತಿಸತಕ್ಕದೆಂದೂ, ಸಮಯದಲ್ಲಿ ಒಬ್ಬರಿಗೊಬ್ಬರು ಸೈನ್ಯ ಸಹಾಯ ಮಾಡುವುದೇ ಆಗಲೀ, ಆರ್ಥಿಕ ರಿಯಾಯಿತಿಯ ವಿಷಯವಾಗಿಯಾಗಲೀ ಯಾವ ತಿರ್ಮಾನವನ್ನೂ ಮಾಡಿಕೊಂಡಿಲ್ಲವೆಂದು ಹೇಳಲಾಗಿದೆ.

ನೋಟೀಸು.

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮಹಾಸಭೆಯ ಏರ್ಪಾಡನ್ನು ಮಾಡಲಿಕ್ಕೂ, ಆ ಸಭೆಯ ಅಧ್ಯಕ್ಷರನ್ನು ಆರಿಸಲಿಕ್ಕೂ ಸದರಿ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ. 8ನೇ ಬುಧವಾರ ಬೆಳಿಗ್ಯೆ 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವುದು. ಕಮಿಟಿಮೆಂಬರುಗಳೆಲ್ಲರೂ ಹಾಜರಾಗಬೇಕಾಗಿ ಕೋರಿಕೆ.

ಮಡಿಕೇರಿ, ಐ. ಪಿ. ಕಾರ್ಯಪ್ಪ,
ತಾ. 1—4—1936. (ಜನರಲ್ ಸೆಕ್ರೆಟರಿ.)

ಹಿಟ್ಲೆರರ ಜಯ.

"ಹಿಟ್ಲರನೇ ಜರ್ಮನಿ"

ಜರ್ಮನಿಯಲ್ಲಿ ಮೊನ್ನೆ ನಡೆದ ಜನಾವಣಿಯ ಫಲಿತಾಂಶಗಳು ಪ್ರಕಟವಾಗಿದೆ. ಅಲ್ಲಿನ ಒಟ್ಟು ಓಟರರ ಸಂಖ್ಯೆ 45 408,000; ಅವುಗಳಲ್ಲಿ 44,932,000 ಓಟುಗಳು ಕೊಡಲ್ಪಟ್ಟವು. ಆ ಓಟುಗಳ ಪೈಕಿ 5,42,000 ಓಟುಗಳು ನಾಜಿ ಪಕ್ಷಕ್ಕೆ ವಿರೋಧವಾಗಿ ಕೊಡಲ್ಪಟ್ಟವು. ಈ ಜನಾವಣೆಯಲ್ಲಿ ಹಿಟ್ಲರರಿಗೆ ಶೇಕಡ 98.9 ರಂತೆ ಓಟು ದೊರೆಯಿತು.

ಈ ವಿಷಯ ಟೀಕಿಸುತ್ತಾ ಕೆಲವು ಜರ್ಮನ್ ಪತ್ರಿಕೆಗಳು "ಹಿಟ್ಲರನೇ ಜರ್ಮನಿ' ಎಂದು ಪ್ರಶಂಸಿಸಿರುವವು. ಹಿಟ್ಲರರ ಈ ಅಪ್ರತಿಮ ಜಯದಿಂದ ಫ್ರಾನ್ಸ್ ಮತ್ತು ಬೆಲ್ಜಿಯಮ್‌ನಲ್ಲಿ ಎಷರೀತ ಕಳವಳ ಉಂಟಾಗಿದೆ

ಯುದ್ಧ ವಾರ್ತೆ.

ಮಾರ್ಚ್ ತಾ. 25.

ರಾಸ್ ನಾಸೀಬುರವರು ಅಪಾಯದಿಂದ ಪಾರಾದರು.

ಇತ್ತೋಪಿಯಾ ಸೈನ್ಯದ ಯುವಕ ಸೇನಾನಾಯಕ ರಾಜ ರಾಸ್ ನಾಸೀಬುರವರು ಜಿಜಿಗಾದಲ್ಲಿ ಇದ್ದಾಗ್ಗೆ ಇವರ ಅರಮನೆಯ ಮೇಲೆ ಇಟಲಿಯ ವಿಮಾನಗಳು ಬಾಂಬುಗಳನ್ನೆಸೆದು ಇಡೀ ಅರಮನೆಯನ್ನೇ ಧ್ವಂಸ ಮಾಡಿದವು ಅದೃಷ್ಟವಶಾತ್ ಅವರು ಅದಕ್ಕಿಂತ ಸ್ವಲ್ಪ ಮುಂಚಿತವಾಗಿ ಟರ್ಕಿ ಮಂತ್ರಾಲೋಚಕರಾದ ವಾಹಿಬ್ ಪಾಷಾರವರಲ್ಲಿಗೆ ಹೋಗಿದ್ದರು

ದಕ್ಷಿಣಕ್ಕಾಗಿ ಆಕ್ರಮಣ ಪ್ರಾರಂಭಿಸಿದರು.

ಇಟಲಿಯನರು ದಕ್ಷಿಣಕ್ಕಾಗಿ ಆಕ್ರಮಣವನ್ನು ಪ್ರಾರಂಭಿಸಿದರು. ಅವರ ಪ್ರಕಟಣೆ ಪ್ರಕಾರ ಶಾಶಬೆನೆ ಮತ್ತು ಕಾಫ್ತಾ ಎಂಬೆರಡು ಸ್ಥಳಗಳು ಇಟಲಿಯವರ ಕೈವಶವಾಗಿದೆಯಂತೆ.

ಮಾರ್ಚ್ ತಾ. 26.

ರಾಜಕುಮಾರರು ಸೌಖ್ಯದಲ್ಲಿರುವರು.

ಇತ್ತೋಪಿಯಾದ ರಾಜಕುಮಾರರು ಘಾಯಗೊಂಡು ರಾಜಧಾನಿಗೊಯ್ಯಲ್ಪಟ್ಟಿರುವರೆಂಬ ವಾರ್ತೆಯು ಪೂರಾ ಸುಳ್ಳೆಂದು ತಿಳಿಯಲಾಗಿದೆ.

ಮಾರ್ಚ್ ತಾ. 27.

ಜಿಜಿಗಾದ ಮೇಲೆ ಪುನಃ ಬಾಂಬು.

ಜಿಜಿಗಾದ ಮೇಲೆ ಪುನಃ ಬಾಂಬುಗಳನ್ನು ಎಸೆಯಲಾಯಿತು, ಈ ಪ್ರಕಾರ ಆ ಪಟ್ಟಣ ಪೂರಾ ನೆಲಸಮವಾಗಿದೆ

ಜಿಜಿಗಾದಲ್ಲಿನ ಬಾಂಬಿನ ಧಾಳಿಯ ಪರಿಣಾಮವಾಗಿ ಅಲ್ಲಿನ ಹಿಂದೀಯರಿಗೆ ಅಪರಿಮಿತವಾದ ಕಷ್ಟಗಳಾಗಿವೆ. ಈ ಕಾರಣದಿಂದ ಅವರು ಇಂಡಿಯಾ ಸರ್ಕಾರಕ್ಕೆ ಪುಕಾರ ಬರೆದುಕೊಂಡಿರುವರೆಂದು ತಿಳಿಯಲಾಗಿದೆ.

ಚಕ್ರವರ್ತಿಗಳು.

ಚಕ್ರವರ್ತಿಗಳು ತಮ್ಮ ಸೈನ್ಯಗಳನ್ನು ಕೋರೆಂನಿಂದ ಸಕೋಟ ಎಂಬಲ್ಲಿಗೆ ಒಯ್ದಿರುವರು. ಸಾಧ್ಯವಾದ ಎಲ್ಲಾ ಉತ್ತಮ ಸ್ಥಳಗಳನ್ನು ಭದ್ರಪಡಿಸುವ ಉದ್ದೇಶದಲ್ಲಿ ಈ ಪ್ರಕಾರ ಸೈನ್ಯಗಳನ್ನು ಒಯ್ದಿದ್ದಾಗಿದೆ.

ಮಾರ್ಚ್ ತಾ. 29

ಹಾರಾರ್ ನಗರವು ಜ್ವಾಲಾಮಯವಾಯಿತು.

ಅಬಿಸೀನಿಯದ ಎಡನೇ ಮುಖ್ಯ ನಗರವಾದ ಹಾರಾರ್ ನಗರದ ಮೇಲೆ 37 ಇಟಲಿ ವಿಮಾನಗಳು ಬಾಂಬಿನ ಸುರಿಮಳೆಯಿಂದ ಇಡೀ ನಗರವನ್ನೇ ಧ್ವಂಸ ಮಾಡಿವೆ. ಕಟ್ಟಡಗಳೆಲ್ಲ ಜ್ವಾಲಾಮಯವಾಗಿ ಜನರು ಇಕ್ಕಟ್ಟಾದ ಓಣಿಗಳಲ್ಲಿ ಸಿಕ್ಕಿ ವ್ಯತರಾದರು. ಫ್ರೆಂಚ್ ಆಸ್ಪತ್ರೆಯೂ, ಕೆಥೋಲಿಕ್ ಮಿಶನ್ ಚರ್ಚ್, ಅನೇಕ ಕೋಪ್ಟಿಕ್ ಚರ್ಚ್‌ಗಳೂ ಮತ್ತು ಮಹಮದ್ದಾಲಿ ಸ್ಕ್ವೇರ್ಸ್ ಕಟ್ಟಡವೂ ಪೂರಾ ಧ್ವಂಸವಾಗಿವೆ. ಅಲ್ಲದೆ ಒಂದು ಮುಸ್ಲಿಂ ಮಸೀದಿಯೂ ನೆಲಸಮವಾಗಿದೆ. ಇದರ ಒಟ್ಟು ನಷ್ಟ ಅಪರಿಮಿತವಾಗುವದೆಂಬದರಲ್ಲಿ ಸಂಶಯವಿಲ್ಲ. ಪ್ರಾಣ ಹಾನಿಯ ಸಂಖ್ಯೆ ತಿಳಿದುಬಂದಿರುವದಿಲ್ಲ.

ಇಟಲಿಯವರ ಜಯ.

ಮಕೇಲಿನ ಪಶ್ಚಿಮಕ್ಕಿರುವ ಸಕೋಟ ಮತ್ತು ಡೆಬ್ರೇಕ್ ಎಂಬ ಎರಡು ಪಟ್ಟಣಗಳೂ ಇಟಲಿಯವರ ಕೈವಶವಾಗಿದೆ ಎಂದು ಪ್ರಕಟವಾಗಿದೆ. ಈ ಆಕ್ರಮಣದಿಂದ ಇಟಲಿಯವರು. ಈಗ ಚಕ್ರವರ್ತಿಗಳು ವಾಸವಿರುವ ಗೊಂಡಾರ್ ಎಂಬಲ್ಲಿಗೆ 50 ಮೈಲು ಮಾತ್ರ ದೂರದಲ್ಲಿರುವರು. ಇಟಲಿಯ ವಿಮಾನಗಳು ಈ ಪ್ರಾಂತದ ಪರಹದ್ದಿನಲ್ಲಿ ಪ್ರತಿನಿತ್ಯವೂ ಬಾಂಬಿನ ಸುರಿಮಳೆಗೈಯ್ಯುತ್ತಿರುವರು.

ಡಾಕಾ ಇಟಲಿಯವರ ಕೈವಶವಾಯಿತು.

ಡೆಬ್ರೇಕ್ ಎಂಬಲ್ಲಿಂದ 8 ಮೈಲು ದಕ್ಷಿಣಕ್ಕಿರುವ ಡಾಕಾ ಎಂಬ ಚಿಕ್ಕ ಪಟ್ಟಣವೂ ಸಹ ಏನೊಂದು ಕಡೆಯಿಲ್ಲದ ಇಟಲಿಯವರ ಕೈ ಸೇರಿತು.

ಮಾರ್ಚ್ ತಾ. 30

ಡಗ್ಗಾಬುರ್ ಒಳಿಯುದ್ದ.

ಡಗ್ಗಾಬುರ್ ಬಳಿ ಜನರಲ್ ಗ್ಯಾಜಿಯೊಯನರವರ ಸೈನ್ಯಕ್ಕೂ ರಾಸ್ ನಾಸಿಬುರವರ ಸೈನ್ಯಕ್ಕೂ ಎರಡು ದಿವಸಗಳಿಂದ ಮಹಾ ಕಾಳಗ ನಡೆಯುತ್ತಲಿದೆ. ಇಕ್ಕಡೆಯಲ್ಲೂ ಸಾವಿರಕ್ಕೆ ಮೇಲ್ಪಟ್ಟು ಪ್ರಾಣಹಾನಿಯಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಈ ಎರಡು ದಿನಗಳಲ್ಲಿ ಇಟಲಿಯವರು 25 ಮೈಲು ಮುಂದುವರಿದಿರುವರು.

ಮಾರ್ಚ್ ತಾ. 31.

ಅಸ್ಸಾ ಪಟ್ಟಣವು ಇಟಲಿಯವರ ಕೈವಶವಾಯಿತು.

ಅವಾಷ್ ನದಿಯ ಬಳಿಯಲ್ಲಿರುವ ಅಸ್ಸಾ ಎಂಬ ಒಂದು ಪಟ್ಟಣವನ್ನು ಇಟಲಿಯವರು ಬಹಳ ಪ್ರಯಾಸದಿಂದ ಕೈವಶ ಮಾಡಿಕೊಂಡು ಅಲ್ಲಿ ಇಟಲಿ ಧ್ವಜವನ್ನೇರಿಸಿದರು.

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ಮುಂತಾದುವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—

P. S. RAMAPPA,
Rattan Works,
MecDowell & Co., Buildings,
4—1 Mercara.

ESTATE KUMBLIES.

Wholesale Dealers. Moderate prices,

We suppiy good and fresh Kumblies direct from the manufacturers in wholesale and cheap rates avoiding the middleman's profits and commission Please place a trial order and compare the favourable rates All orders will be promptly delivered at the Estates at cost price,

Please apply to—

Messrs, G NAGAPPA,
Kumbly Merchants & Dealers in Rugs and Carpets,
Chikpet,
4—1 Bangalore City.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯು ಏಣಿಯನ್ನೇರಿರಿ. ಲೋಕದಲ್ಲಿ ಸಾವಿರಾರು ಜನರು ಅವನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ವಸ್ತ್ರಗಳ ಟಿನ್ನೊಂದಕ್ಕೆ ರೂ. 1.

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

ಆತಂಕನಿಗ್ರಹ ಫಾರ್ಮಸಿ, ಚಿಕ್ಕಪೇಟೆಚೌಕ,
52—1 ಬೆಂಗಳೂರು ಸಿಟಿ.

ಮೊರಾಟಿಕ್ಕಿದೆ.

ಹಟ್ಟಿ ಎಸ್ಟೇಟು.

(ಮಡಿಕೇರಿ ಸೋಮವಾರಪೇಟೆ ರೋಡು 10ನೇ ಮೈಲು)

43 ಎಕರೆ ಕಾಫಿ ತೋಟ, 43 ಎಕರೆ ಒಳ್ಳೇ ಕಾಡು, 10½ ಎಕರೆ ಭೂಮಿ, ಕಾಫಿ ರಾಟಿ ಮನೆ, ಕೂಲಿಲೈನು, ಬಂಗಲೆ ಎಲ್ಲವೂ ಇರುವ ಮೇಲ್ಕಂಡ ತೋಟವು ಮೊರಾಟಕ್ಕಿದೆ. ನ್ಯಾಯವಾದ ಕ್ರಯ ಬಂದರೆ ಕೊಡಲಾಗುವುದು. ಒಡನೆ ಈ ವಿಳಾಸಕ್ಕೆ ಬರೆಯಿರಿ

ಮಿಸೆಸ್ ಡೇವಿಸ್,
4—4 ಸುಂಟಿಕೊಪ್ಪ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಮುಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊಡಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುನ್ನವೆಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಜೆ ಮೊಡವೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಣ್ಣಯ್ಯನವರು,
ಸೋಮವಾರಪೇಟೆ—ಮೆ. ಕೆ. ವೆಂಗಪ್ಪನವರು
ನಾಪೋಕ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಪತ್ರವ್ಯವಹಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಜೂಜಾಟವೂ, ಬಡವರೂ.

ಅಯ್ಯಾ,

ಈ ವೊದಲು ಜೂಜು ಆಡಲಿಕ್ಕೆ ಅಪ್ಪಣೆ ಇರಲಿಲ್ಲ. ಕೆಲವು ದಿನಗಳಲ್ಲಿ ಮೊತ್ತ ಇದಕ್ಕೆ ಅಧಿಕಾರಿಗಳಿಂದ ಅಪ್ಪಣೆ ದೊರೆಯುತ್ತಿತ್ತು. ಈಗ ಕೂಲಿಗಾರರಲ್ಲಿ ಮತ್ತು ಬಡವರಲ್ಲಿ ದುಡ್ಡು ಹೆಚ್ಚಿದ್ದೆಎಂಬುದನ್ನು ವ್ಯಕ್ತಪಡಿಸಲಿಕ್ಕೋ ಎಂಬಂತೆ ಕೊಡಗಿನ ಪ್ರತಿ ಸಂತೆಗಳಲ್ಲಿ ಜೂಜಾಡುವವರನ್ನು ಕಾಣುತ್ತೇನೆ. ಜೂಜಾಡುವುದು ವೋಸಕ್ಕೆ ಬೀಜಕ್ಕೆ ಕಾರಣವೆಂದೂ, ಇದು ಅತ್ಮಹತ್ಯೆ, ಕೊಲೆ, ದರೋಡೆ ಮತ್ತು ಕಳ್ಳತನಕ್ಕೆ ಅಡಿಪಾಯವೆಂದೂ, ಇದು ಕಾನೂನಿಗೆ ವಿರೋಧವೆಂದೂ ಈ ವೊದಲು ಅಧಿಕಾರಿಗಳು ಇದಕ್ಕೆ ಅಪ್ಪಣೆ ಕೊಡುತ್ತಿರಲಿಲ್ಲ. ಸೋಡ್ತಿ ಕರೆಯುವುದು ವೋಸಪಡಿಸುವ ಒಂದು ಸಂಘವೆಂದು ಇದನ್ನು ಕಳೆದ ವರ್ಷದಲ್ಲಿ ಮನ್ನ ಮಾಡಲಾಯಿತು. ಆದರೆ ಈಗ ಅಧಿಕಾರಿಗಳು ಜೂಜಾಡುವುದಕ್ಕೆ ಹೇಗೆ ಅಪ್ಪಣೆ ಕೊಡುತ್ತಿರುವರೆಂದು ಗೊತ್ತಾಗುವುದಿಲ್ಲ. ಈ ವಿಷಯದಲ್ಲಿ ಸುಧಾರಕರು ಏನು ಮಾಡುತ್ತಿರುವರೆಂದೂ ನೋಡತಕ್ಕದ್ದಾಗಿದೆ. ಅಲ್ಲದೆ ನ್ಯಾಯವಿಧಾಯಕ ಸಭೆಯವರು ಇಂಥಾ ಜೂಜುಗಳು ನಡೆಸಲಿಕ್ಕೆ ಬಿಡದಂತೆ ಸರ್ಕಾರಕ್ಕೆ ಸಲಹೆ ಕೊಡಬೇಕಾದದ್ದು ಅವಶ್ಯವಾಗಿದೆ.

ಹೊಟ್ಟೆ ತುಂಬಾ ಊಟವಿಲ್ಲದೆ, ಮೈತುಂಬಾ ಬಟ್ಟೆಯಿಲ್ಲದೆ, ಬಡ ಕೂಲಿಕಾರರು ಕಮ್ಮಿ ಸಂಬಳದಿಂದ ಕಾಲಹರಣೆ ಮಾಡುತ್ತಿರುವಲ್ಲಿ ಜೂಜು ಆಟಗಾರರ ಒಂದು ವಿನೋದ. ಪಾಪ ತಮ್ಮ ಮುಂದಿನ ಕುಟುಂಬದ ಪೋಷಣೆಗೆ ಬೇರಾಗುವ ಹಣವನ್ನು ಸಂಬಳವಾದ ಕೂಡಲೇ ತೆಗೆದುಕೊಂಡು ಹೋಗುವ ಸಮಯಕ್ಕೆ ಸರಿಯಾಗಿ ಈ ಜೂಜಾಟಕಾರರು ಇವರನ್ನು ಬಲದು ಮಾಡಲಿಕ್ಕೆ ನಿಂತಿರುವರು. ಇದನ್ನಾಡಲಿಕ್ಕೆ ಬಿಟ್ಟ ಅಧಿಕಾರಿಗಳು ಬಡವರ ಹೀನಸ್ಥಿತಿಗೆ ಗಮನಕೊಡದಿದ್ದಲ್ಲಿ ಬಡವರು ಅನ್ಯಾಯವಾಗಿ ಹಾಳಾಗುವರೆಂಬುವರಲ್ಲಿ ಸಂಶಯವಿಲ್ಲ. ವ್ಯವಸಾಯದ ಉತ್ಪತ್ತಿ ಕಡಿಮೆ; ಉತ್ಪತ್ತಿ ಇದ್ದ ಧಾಂಣೆ ಇಲ್ಲ. ಇದರ ಮಧ್ಯೆ ಜೂಜಾಟಕಾರರೂ ಒಂದು ರೀತಿಯ ಪಾಪ ಈಗಾಗಲೇ ಆತ್ಮಹತ್ಯೆಗಳೂ ಮತ್ತು ದರೋಡೆಗಳೂ ಹೆಚ್ಚುತ್ತಿವೆ. ಇವುಗಳ ಗುಟ್ಟೇನೆಂಬುವುದನ್ನು ಸುಧಾರಕರು ಕಂಡುಹಿಡಿಯುವುದು ಅತ್ಯವಶ್ಯ. ಸರ್ಕಾರವೇ ಇಂಥಾ ಸಂಘಗಳಿಗೆ ಉತ್ತೇಜನಕೊಡಬಾರದೆಂದು ಆಶಿಸುತ್ತೇವೆ.

'ಬಡವರ ಬಂಧು.'

ಗಂಧದ ಬೋನಸು ನಿಬಂಧನೆಗಳ ತಿದ್ದುಪಡಿಗಳು.

ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸು ಕೊಡುವ ಕರಡು ರೂಲ್ಸ್‌ಗಳನ್ನು ಕುರಿತು ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಕಮಿಟಿಯವರಿಂದ ನೇಮಿಸಲ್ಪಟ್ಟ ಡೆಪ್ಯುಟೇಶನ್ನಿನವರು ಚೀಫ್ ಕಮಿಷನರವರಿಗೆ ಕಳುಹಿಸಿದ ಪತ್ರ ಮತ್ತು ತಿದ್ದು ಪಡಿಗಳು.

ಪತ್ರ.

ಅಯ್ಯಾ,

ಗಂಧದ ಬೋನಸ್ಸಿನ ಕರಡು ನಿಬಂಧನೆಗಳ ವಿಷಯ ಈ ದೇಶದ ಎಲ್ಲಾ ಕಡೆಗಳಲ್ಲಿ ಸುತ್ತಿ ಗಂಧ ಬೆಳೆಯುತಿವರ ಅಭಿಪ್ರಾಯವನ್ನು ಪಡೆದು, ತಿದ್ದು ಪಡಿಗಳನ್ನು ಮಾಡಲು ಉದ್ಯೋಗಸ್ಥರಲ್ಲದವರ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಿ ಮಾತನಾಡಲು ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯವರಿಂದ ತಾ. 9—2—35 ರಲ್ಲಿ ನಿಯೋಜಿತರಾದ ನಾವು, ನಿಮ್ಮೆದುರು ಈ ಕೆಳಗೆ ಕೊಟ್ಟಿರುವ ಅಭಿಪ್ರಾಯಗಳನ್ನು ಸೂಚಿಸಲಿಚ್ಛಿಸುತ್ತೇವೆ. ಕಮಿಷನರವರನ್ನು ಭೇಟಿಯಾಗಲು ನಮಗೆ ಅವಕಾಶ ಕೊಡದ ಕಾರಣ, ತಾರೀಕು 1—7—35 ರ ಕೊಡಗು ಗಜೆಟ್ಟಿನಲ್ಲಿನ ನೋಟಿಫಿಕೇಶನ ನಂಬ್ರ 67 ತಾ. 28-6—35 ರಲ್ಲಿ ಪ್ರಕಟವಾದ ಅನ್‌ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಬೋನಸ್ಸು ಕೊಡುವ ಕರಡು ರೂಲ್ಸ್‌ಗಳನ್ನು ಕುರಿತು ಈ ಕೆಳಗೆ ಕೊಟ್ಟಿರುವ ತಿದ್ದು ಪಡಿಗಳನ್ನು ನಿಮಗೆ ಕಳುಹಿಸಬೇಕಾಯಿತು.

ಈ ಕೆಳಗೆ ಕೊಟ್ಟಿರುವ ತಿದ್ದು ಪಡಿಗಳಿಗೆ ತಕ್ಕ ಕಾರಣಗಳನ್ನು ಸಂಕ್ಷೇಪವಾಗಿ ಕೊಟ್ಟಿರುತ್ತೇವೆ. ಆದರೆ ನಿಮ್ಮೊಡನೆ ಯೂ ಕಮಿಷನರವರೊಡನೆ ರೂಬು ರೂಬು ಮಾತಾಡುವ ಅವಕಾಶ ದೊರೆತಿದ್ದಿದ್ದರೆ ವಿಷದವಾಗಿ ನಮ್ಮ ಕಾರಣಗಳನ್ನು ವಿವರಿಸಲು ಅನುಕೂಲವಾಗುತ್ತಿತ್ತು.

ಈ ಅನುಕೂಲವು ಲಭಿಸದ್ದರಿಂದ ಈ ತಿದ್ದು ಪಡಿಗಳನ್ನು ಬರೆದು ಕಳುಹಿಸುವದಲ್ಲದೆ ನಮಗೆ ಬೇರೆ ವಿಧಾನವಿಲ್ಲದಾಯಿತು. ಕೊಡಗಿನ ಖಾಸಗಿ ಭೂಮಾಲೀಕರು ಗಂಧದ ಬೆಳವಣಿಗೆಯನ್ನು ಕೈಕೊಳ್ಳಬೇಕೆಂದಾದರೆ ಈ ಬೋನಸ್ಸು ರೂಲ್ಸ್‌ಗಳನ್ನು ಕುರಿತು ದೇಶಸ್ಥರ ಅಭಿಪ್ರಾಯಗಳನ್ನು ನೀವು ಮನ್ನಿಸಬೇಕು. ಈಗಲಾದರೂ ಉದ್ಯೋಗಸ್ಥರಲ್ಲದವರ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಿ ಅವರು ದೇಶದ ಎಲ್ಲಾ ಭಾಗಗಳಲ್ಲಿ ಸುತ್ತಿ ಜನರ ಅಭಿಪ್ರಾಯಗಳನ್ನು ಪಡೆದು ಈ ರೂಲ್ಸುಗಳನ್ನು ತಿದ್ದು ಪಡಿ ಮಾಡುವಂತೆ ಮಾಡುವದಕ್ಕೆ ಸಮಯವಿಲ್ಲ. ಈ ಸಲಹೆಗಳಿಗೆ ನೀವು ತಕ್ಕ ಗಮನ ಕೊಡುವಿರಾಗಿ ಹಾರೈಸುವ.

ಇತೀ ನಿಮ್ಮ ವಿಧೇಯರಾದ

ಯನ್. ಆರ್. ಸುಬ್ಬಣ್ಣಯ್ಯ,
ಬಿದ್ದಂಡ ಯಂ. ಕಾರ್ಯಪ್ಪ,
ಯಸ್. ಯನ್. ರಾಮಶೆಟ್ಟಿ,
ಐ. ಪಿ. ಕಾರ್ಯಪ್ಪ,
ಕೊಡುದೆರ ಬಿ. ಚಂಗಪ್ಪ.

ಮಡಿಕೇರಿ,
ತಾ. 27—3—'36.

ಕರಡು ನಿಂಫನೆಗಳಿಗೆ ತಿದ್ದು ಪಡಿಗಳು.

1. ಗಂಧದ ಮರಗಳ ವಿಷಯದಲ್ಲಿ ನಿಗಾ ತೆಗೆದುಕೊಳ್ಳುವಂತೆ ಪ್ರೋತ್ಸಾಹಿಸಲು ಚೀಫ್ ಕಮಿಷನರವರು ತಮ್ಮ 5—5—32ರ 60ನೇ ನಂಬರು ನೋಟಿಫಿಕೇಷನ್ನಿನ ಪ್ರಕಟ ಪಡಿಸಿದ್ದ ರೂಲ್ಸ್‌ಗಳನ್ನು ಮಾರ್ಪಾಟು ಮಾಡಿ ಅನ್‌ರಿಡೀಮ್ಡ್ (ಬಿಡುಗಡೆ ಮಾಡಲ್ಪಡದ) ಜಾಗದ ಮೂಲೀಕರು ತಮ್ಮ ಅಂಥಾ ಜಾಗದಲ್ಲಿರುವ ಗಂಧದ ಮರಗಳ ವಿಷಯದಲ್ಲಿ ತಕ್ಕ ನಿಗಾ ಕೊಡಲು ಶ್ರಮವಹಿಸಿದ್ದೇ ಆದರೆ ಅಂಥವರಿಗೆ ಸರ್ಕಾರಕ್ಕೆ ಬರುವ ಆದಾಯದಲ್ಲಿ ಬೋನಸು ರೂಪದಲ್ಲಿ ಒಂದು ಭಾಗ ಸಿಕ್ಕುವಂತೆ ಮಾಡುವ ಒಂದು ಯೋಜನೆಯನ್ನು ಜಾರಿಗೆ ತರಬೇಕೆಂದು ಪ್ರಚುರಪಡಿಸಲು ಸಂತೋಷವುಳ್ಳವರಾಗಿದ್ದಾರೆ.

ಇದನ್ನು ಇಟ್ಟುಕೊಳ್ಳಬಹುದು.

2. ಆಯಾ ಸುತ್ತಳತೆಗೆ ತಕ್ಕಂತೆ ಸತ್ತ ಮರಗಳಿಗೆ ಕೊಡಲ್ಪಡುವ ಬೋನಸ್ಸು ಈ ಕೆಳಗೆ ಕಾಣಿಸ್ತಿರುವಂತಿರತಕ್ಕದ್ದು.

ತೊಗಟೆ ಮೇಲೆ ನೆಲದಿಂದ 4½ ಅಡಿ ಮೇಲೆ ಅಳತೆ ಮಾಡಿದ ಸುತ್ತಳತೆ			ಬೋನಸ್ಸು
20 ಅಥವಾ 20 ಇಂಚಿನ ವರೆಗೆ			0 8 0
20 ಇಂಚಿನ ಮೇಲ್ಪಟ್ಟು	25 ಇಂಚು	ವರೆಗೆ	2 0 0
25 ,, ,,	30 ,,	,,	5 0 0
30 ,, ,,	35 ,,	,,	20 0 0
35 ,, ,,	40 ,,	,,	40 0 0
40 ಇಂಚಿನ ಮೇಲೆ			75 0 0

ತಿದ್ದು ಪಡಿ:—'ಬೋನಸ್ಸು ರಿಡೀಮ್ಡ್ ಜಾಗದ ಗಂಧದ ಮರಗಳಿಗೆ ಕೊಡಲ್ಪಡುವಂತೆಯೇ ತೂಕದ ಪ್ರಕಾರ ಕೊಡಲ್ಪಡಬೇಕು. ಮತ್ತು ಅದು ಒಟ್ಟು ಬೆಲೆಯ ಶೇಕಡ 60ರಷ್ಟು ಇರತಕ್ಕದ್ದು.'

ಈ ತಿದ್ದುಪಡಿಗೆ ಕಾರಣಗಳು—'ಗಂಧಕ್ಕೆ ತೂಕದ ಪ್ರಕಾರ ಬೆಲೆಯಲ್ಲದೆ ಅದರ ಸುತ್ತಳತೆಯ ಪ್ರಕಾರವಲ್ಲ. ಮರದ ಸುತ್ತಳತೆಗೂ ಮತ್ತು ಅದರಲ್ಲಿ ಮೂರಾಟಕ್ಕೆ ಸಿಗುವ ಗಂಧದ ಸೇಗಿಗೂ ಒಂದೇ ನಿಷ್ಕರ್ಷಿತ ಪ್ರಮಾಣವಿರುವದಿಲ್ಲ. ಆದ್ದರಿಂದಲೇ ರಿಡೀಮ್ಡ್ ಜಾಗದಲ್ಲಿನ ಗಂಧದ ಮರಗಳಿಗೆ ತೂಕದ ಪ್ರಕಾರ ಬೋನಸ್ಸು ಕೊಡಲ್ಪಡುತ್ತಿರುವುದು.

60% ಬೋನಸು ಕೊಡುವದರಿಂದ ರೈತನು ತನ್ನ ಜಾಗದಲ್ಲಿ ಈಗಿರುವ ಮರಗಳನ್ನು ಜೋಪಾನವಾಗಿ ಪೋಷಿಸಲು ಉತ್ಸಾಹಿತನಾಗುವುದಲ್ಲದೆ ಮುಂದಕ್ಕೆ ಮರ ಬೆಳೆಯಲೂ ಅತನಿಗೆ ಉತ್ತೇಜನ ಉಂಟಾಗುತ್ತದೆ.

ಸೂಚನೆ:—(1) ಈ ಬೋನಸು ಅಥವಾ ಆಯಾಯ ಸಮಯದ ವರ್ಷೇಟ್ಟಿನಂತೆ ಮರದ ಕ್ರಯದ ಶೇಕಡ 30 ರಷ್ಟು—ಇವೆರಡರಲ್ಲಿ ಯಾವುದು ಕಮ್ಮಿಯಾಗುತ್ತೋ ಅಂಥದನ್ನು ಕೊಡಲಾಗುವುದು.

ಮತ್ತು

(2) ಮಾರುವುದಕ್ಕೆ ತಕ್ಕಷ್ಟು ಸೇಗು ಇಲ್ಲದ 20 ಇಂಚು ಸುತ್ತಳತೆ ಅಥವಾ ಅದರೊಳಗಿನ ಸುತ್ತಳತೆ ಮರಕ್ಕೆ ಬೋನಸು ಕೊಡಲಾಗುವದಿಲ್ಲ.

ಇವೆರಡು ಸೂಚನೆಗಳು ಮೇಲಿನ ತಿದ್ದುಪಡಿಯು ದೃಷ್ಟಿಯಿಂದ ಅನಾವಶ್ಯಕವಾದ್ದರಿಂದ ತೆಗೆದುಹಾಕಲ್ಪಡಬೇಕು.

(3) ಮೂಲೀಕನ ಅಪೇಕ್ಷೆ ಮೇರೆ ತೆಗೆಯುವಂಥಾ ಬದುಕಿರುವ ಮರಕ್ಕೆ ಬೋನಸ್ಸು ಕೊಡಲಾಗುವುದಿಲ್ಲ.

ತಿದ್ದುಪಡಿ:—'ಅತ್ಯಾವಶ್ಯಕವಾಗಿ ಕೀಳಬೇಕೆಂದು ಕಂಡು ಬಂದಲ್ಲಿ ಮೊತ್ತ ಜೀವಂತ ಮರಗಳನ್ನು ಕೀಳಬಹುದಲ್ಲದೆ ಇತರ ಸಂದರ್ಭದಲ್ಲಿ ಬರೇ ಸತ್ತ ಮರಗಳನ್ನು ಮಾತ್ರ ಕೀಳಲ್ಪಡುವುದು; ಅಲ್ಲದೆ ಕಿತ್ತ ಎಲ್ಲಾ ಮರಗಳಿಗೂ ಬೋನಸು ಕೊಡಲ್ಪಡುವುದು.'

(4) ಮೂಲೀಕನಿಂದ ಉದ್ದೇಶಪೂರ್ವಕವಾಗಿ ಕೊಲ್ಲಲ್ಪಟ್ಟಂಥ ಅಥವಾ ಮೂಲೀಕನು ಯಾ ಅವನ ಸಂಬಂಧಪಟ್ಟವರು ತಕ್ಕ ನಿಗ ತೆಗೆದುಕೊಳ್ಳದ್ದರಿಂದ ಸತ್ತಂಥ ಮರಗಳಿಗೆ ಬೋನಸು ಕೊಡಲಾಗುವುದಿಲ್ಲ.

ಈ ಸೂಚನೆಯ ಪ್ರಥಮ ಅಂಶವಾದ 'ಉದ್ದೇಶಪೂರ್ವಕವಾಗಿ ಕೊಲ್ಲಲ್ಪಟ್ಟ' ಎಂಬದನ್ನು ಇಟ್ಟುಕೊಳ್ಳಬಹುದು; ಆದರೆ 'ಮೂಲೀಕನು ಯಾ ಅವನ ಸಂಬಂಧಪಟ್ಟವರು ನಿಗ ತೆಗೆದುಕೊಳ್ಳದೆ ಸತ್ತಂಥ' ಎಂಬ ಅಂಶವನ್ನು ತೆಗೆದು ಹಾಕಬೇಕು.

(ಸೂಚನೆ:—ಈ ಮೇಲಿನ ನಿಬಂಧನೆಯಲ್ಲಿ 'ಉದ್ದೇಶಪೂರ್ವಕ' ವೆಂದರೆ ಮೂಲೀಕನೇ ಮರವನ್ನು ಕಡಿದು ಹಾಕುವುದು ಯಾ ಸುಟ್ಟುಬಿಡುವದು ಎಂದು ಮಾತ್ರವಲ್ಲದೆ ಬೇರೆ ಅರ್ಥವುಳ್ಳದ್ದಾಗಬಾರದು)

ಈ ತಿದ್ದುಪಡಿಗೆ ಕಾರಣಗಳು.—ಎರಡನೇ ಅಂಶದಲ್ಲಿನ 'ನಿಗ ತೆಗೆದುಕೊಳ್ಳದೆ' ಎಂಬದನ್ನು ಅಧಿಕಾರಿಗಳು ಅವರಿಗೆ ಬೇಕಾದ ಹಾಗೆ ಅರ್ಥ ಮಾಡಿಕೊಳ್ಳಬಹುದು. ಇದರಿಂದ ಮೂಲೀಕನಿಗೆ ಬಹಳ ಹಾನಿಯಾಗುವುದರಿಂದ ಅವನ್ನು ತೆಗೆದುಹಾಕಬೇಕು.

(5) ಸುಟ್ಟಿರುವ ಅಥವಾ ಸೀದಿರುವ ಯಾವ ಮರಕ್ಕಾದರೂ ಅರ್ಧ ಬೋನಸು ಮಾತ್ರ ಕೊಡಲಾಗುವುದು. ಅದೂ ಮೂಲೀಕನ ಅಜಾಗರೂಕತೆಯಿಂದಾಗಲೀ, ಅಥವಾ ನಿಗಾಕೊಡದೆ ಹೋದದ್ದರಿಂದಾಗಲೀ ಆದದ್ದಲ್ಲವೆಂಬ ಸಂದರ್ಭಗಳಲ್ಲಿ ಮಾತ್ರ. (ಮೇಲಿನ 4 ನೇ ಕಲಂ ನೋಡುವುದು.)

(5) ಈ ನಿಬಂಧನೆಯನ್ನು ಪೂರಾ ತೆಗೆದುಹಾಕಬೇಕು.

ತೆಗೆದು ಹಾಕಬೇಕೆಂಬದಕ್ಕೆ ಕಾರಣಗಳು:—ಉದ್ದೇಶಪೂರ್ವಕವಾಗಿ ಕೊಲ್ಲುವ ಮರಗಳ ಮೇಲೆ ಮೂಲೀಕನಿಗೆ ಏನೊಂದೂ ಬೋನಸು ಕೊಡಲಾಗುವದಿಲ್ಲವೆಂದ ಮೇಲೆ ಯಾವ ಉದ್ದೇಶವಿಲ್ಲದೇನೇ ಅನಿವಾರ್ಯ ಕಾರಣಾಂತರಗಳಿಂದ ಬೆಂದು ಹೋದ ಯಾ ಸೀದು ಹೋದ ಮರಗಳಿಗೆ ಬೋನಸು ಕೊಡಲಾಗುವದಿಲ್ಲವೆನ್ನುವದಂತೂ ನ್ಯಾಯವಿಲ್ಲ.

(6) ಸರ್ಕಾರದಿಂದ ಹೊಸದಾಗಿ ಪಡಕೊಂಡ ಜಾಗದಲ್ಲಾ ಪಡಕೊಂಡ 5 ವರ್ಷಗಳೊಳಗೆ ಯಾವ ಗಂಧದ ಮರಕ್ಕೂ ಬೋನಸು ಕೊಡಲಾಗುವುದಿಲ್ಲ.

ಇದು ತೆಗೆದುಹಾಕಲ್ಪಡಬೇಕು.

ಕಾರಣಗಳು:—ಮೂಲೀಕನಿಗೆ ಶೀಘ್ರವಾಗಿ ಪ್ರತಿಫಲ ದೊರೆಯದೆ ಹೋದಲ್ಲಾ ಈ ರೂಲ್‌ಗಳ ಉದ್ದೇಶವನ್ನು ನೆರವೇರಿಸವುದಕ್ಕೆ ಅವನಿಗೆ ಉತ್ಸಾಹವುಂಟಾಗುವುದಿಲ್ಲ. ಅಲ್ಲದೆ ಒಂದು ಸ್ಥಳವು ದೊರೆತ ಐದು ವರ್ಷಗಳ ವರೆಗೆ ಅವನಿಗೆ ಆ ಸ್ಥಳದಿಂದ ತೆಗೆದ ಯಾವ ಗಂಧಕ್ಕೂ ಬೋನಸ್ಸು ಕೊಡಲಾಗುವುದಿಲ್ಲವೆನ್ನುವದು ನ್ಯಾಯವಾದದ್ದಲ್ಲ.

(7) 35 ಇಂಚು ಅಥವಾ ಅದರ ಮೇಲ್ಪಟ್ಟ ಸುತ್ತಳತೆಯುಳ್ಳ ಮರಕ್ಕೆ ತಾ 5—5—37 ರ ಲಾಗಾಯ್ತಿತು 5 ವರ್ಷಗಳ ತನಕ ಬೋನಸು ಕೊಡಲಾಗುವುದಿಲ್ಲ.

ಇದು ತೆಗೆದುಹಾಕಲ್ಪಡಬೇಕು. ಇದಕ್ಕೂ ಮೇಲಿನ ಕಾರಣಗಳೇ ಆಗಿರುತ್ತವೆ.

(8) ನೆಲದಿಂದ 4½ ಅಡಿ ಮೇಲೆಯೇ ಸುತ್ತಳತೆ ತೆಗೆದು ಕೊಳ್ಳಲ್ಪಡತಕ್ಕದ್ದು. ಮತ್ತು, ತೊಗಟೆಯು ಸ್ವಲ್ಪವಾಗಿಯಾಗಲೀ, ಪೂರ್ತಿಯಾಗಿಯಾಗಲೀ ಹೋಗಿದ್ದರೆ ತೊಗಟೆಗೆ ಯಾವ ರಿಯಾಯಿತಿಯೂ ತೋರಿಸಲ್ಪಡುವದಿಲ್ಲ. 4½ ಅಡಿ ಕೆಳಕವಲುಗಳು ಒಡೆದಿದ್ದರೆ ಅವು ಎಷ್ಟು ಅಥವಾ ಹೆಚ್ಚು ಮರವೆಂತ ಗಣಿಸಲ್ಪಡುವುದು.

ಇದು ತೆಗೆದುಹಾಕಲ್ಪಡಬೇಕು. ಬೋನಸ್ಸು ತೂಕ ಪ್ರಕಾರ ಕೊಡಲ್ಪಡಬೇಕೆಂದು, ಮಾಡಿರುವುದರಿಂದ ಈ ನಿಬಂಧನೆಯ ಅಗತ್ಯವಿಲ್ಲ.

(9) ಬೋನಸು ಸರ್ಕಾರಿ ವರ್ಷದ ಕೊನೆಯಲ್ಲಿ ಕೊಡಲ್ಪಡುವುದು.

ಇದು ಹಾಗೆಯೇ ಇರಬಹುದು.

(10) ಈ ರೂಲ್ಸ್‌ಗಳಲ್ಲಿ ವಿಧಾಯಕವಾಗಿರುವ ಶರತ್ತುಗಳು ಪೂರ್ತಿಯಾಗಿ ನೆರವೇರಿಸಲ್ಪಟ್ಟಿಲ್ಲವೆಂಬ ಕಂಡು ಬಂದಾಗಲೂ, ಎಳೆ ಗಿಡಗಳು ಬೇರೆ ಜಾಗದಲ್ಲಿ ಚೆನ್ನಾಗಿ ಬೆಳೆಯುವುದೆಂಬ ಕಾರಣದ ಮೇಲೂ ಬೋನಸು ಕೊಡದೆ ಯಾವಾ ಬೇಕಾದರೂ ಯಾವ ಮರವನ್ನಾದರೂ, ಗಿಡವನ್ನಾದರೂ ಗೆದುಕೊಂಡು ಹೋಗುವ ಹಕ್ಕನ್ನು ಸರ್ಕಾರವು ಉಳಿಸಿಕೊಡಿದೆ.

ಇದು ತೆಗೆದುಹಾಕಲ್ಪಡಬೇಕು.

ಕಾರಣ—ಈ ನಿರ್ಬಂಧವು ತೆಗೆದು ಹಾಕಲ್ಪಡದಿದ್ದಲ್ಲಿ ಮೂಲೀಕನಿಗೆ ಮರಗಳನ್ನು ಬೆಳೆಸುವ ಉತ್ಸಾಹದ ಬದಲು ಮರಗಳು ಸರ್ಕಾರದಿಂದ ಯಾವಾಗ ಕಿತ್ತೆಗೆಯಲ್ಪಡುವದೊ ಎಂಬ ಸಂಶಯವುಂಟಾಗುವದು.

ಅಲ್ಲದೆ ಗಂಧದ ಮರಗಳನ್ನು ಕಿತ್ತು ಬೇರೆ ಜಾಗದಲ್ಲಿ ನೆಡುವುದಕ್ಕಿಂತ ತನ್ನಷ್ಟಕ್ಕೆ ಬೆಳೆದು ಹುಟ್ಟಿದ ಸ್ಥಳಗಳಲ್ಲಿ ಚೆನ್ನಾಗಿ ಬೆಳೆಯುವದರಿಂದ ಗಂಧದ ಸೆಸಿಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಿತ್ತು ಸಾಗಿಸಬಾರದು.

(11) ಅನ್‌ರಿಡೀಮ್ಡ್ ಜಾಗದ ಮೂಲೀಕನು ಗಂಧದ ಮರವನ್ನು ಕಾಪಾಡಲು ತಕ್ಕ ಎಲ್ಲಾ ನಿಗ ತೆಗೆದುಕೊಂಡದ್ದಾನೆಂತಲೂ, ಗಂಧದ ಮರಗಳ ಪೋಷಣೆ ಮಾಡಲು ನೋಟಿಫಿಕೇಶನಿನಲ್ಲಿ ಲಗತ್ತಿಸಿರುವ ಕ್ರಮಗಳನ್ನು ಜಾರಿಗೆ ತಂದಿದ್ದಾನೆಂತಲೂ ಸರ್ಕಾರಕ್ಕೆ ತೃಪ್ತಿಕರವಾಗಿ ರುಜುವಾತಾಗದೆ ಹೊರತು ಯಾವ ಸಂದರ್ಭದಲ್ಲೂ ಬೋನಸು ಕೊಡಲಾಗುವದಿಲ್ಲ.

ಇದು ತೆಗೆದು ಹಾಕಲ್ಪಡಬೇಕು.

ಕಾರಣ:—ಈ ನಿಬಂಧನೆಯು ಇಡಲ್ಪಟ್ಟದ್ದಾದರೆ ಮೂಲೀಕನಿಗೆ ಬೋನಸು ಸಿಗುವ ಸಂಭವವೇ ಇಲ್ಲದಾಗುವುದಕ್ಕಾಗಿಯಂತೆಕ್ಕೆಂದರೆ, ಅಧಿಕಾರಿಗಳು ಹೇಳಿದಂತೆ ಮಾಡಿರುವೆರೆಂಬುದನ್ನು ಅಧಿಕಾರಿಗಳ ಮನಃತೃಪ್ತಿಯಾಗುವಂತೆ ವಿಷದ ಪಡಿಸುವದು ಸುಲಭ ಸಾಧ್ಯದ ವಿಷಯವಲ್ಲ. ಆದ್ದರಿಂದ ಈ ನಿಬಂಧನೆಯು ಈ ರೂಲ್ಸುಗಳ ಉದ್ದೇಶವನ್ನೇ ನಿರರ್ಥಕಗೊಳಿಸುತ್ತದೆ.

ರೂಲು ನಂಬರು 3. ಅನ್‌ರಿಡೀಮ್ಡ್ ಜಾಗದಲ್ಲಿ ಗಂಧದ ಬೆಳೆವಣಿಗೆಗೆ ಇರುವ ಪ್ರತಿಯೊಬ್ಬ ಮೂಲೀಕನೂ ತಾನು ಬೋನಸ್ಸು ಪಡೆಯಲು ಅರ್ಹತೆಯನ್ನು ಪಡೆಯಬೇಕೆಂದು ಇಷ್ಟಪಟ್ಟು 31-7-36ರ ಒಳಗೆ ತನ್ನ ಜಾಗದಲ್ಲಿರುವ ಎಲ್ಲಾ ಗಂಧದ ಮರಗಳ ವಿವರಗಳನ್ನೂ ತಿಳಿಯಪಡಿಸಬೇಕು. ಅಂಥವನು ಅವಶ್ಯವಿರುವ ಫಾರಂಗಳಿಗೂ, ಅಳತೆ ಟೇಪುಗಳಿಗೂ ಹತ್ತಿರದ ರೆವಿನ್ಯೂ ಅಥವಾ ಫಾರೆಸ್ಟ್ ಆಫೀಸುಗಳನ್ನು ಕೇಳಿಕೊಳ್ಳಬೇಕು. ಅಳತೆ ಹೇಗೆ ಮಾಡಬೇಕು, ಫಾರಮಿನಲ್ಲಿ ವಿವರಗಳನ್ನು ಹೇಗೆ ಬರಾಯಿಸಬೇಕೆಂಬ ಅಂಶಗಳನ್ನು ಸದರಿ ಆಫೀಸರು ತಿಳಿಸಿಕೊಡುತ್ತಾರೆ. ಅನ್‌ರಿಡೀಮ್ಡ್ ಜಾಗದ ಮೂಲೀಕನು ತನ್ನ ಜಾಗದಲ್ಲಿ ಕಾಣಬರುವ ಗಂಧದ ಮರದ ಸಂಖ್ಯೆ ಮತ್ತು ಅದರ ಸುತ್ತಳತೆ ಇವುಗಳ ಮೊಖಾಬಿಲೆ ಬಗ್ಗೆ ತನ್ನ ಜಾಗಕ್ಕೆ ಬರುವ ಯಾವ ರೆವಿನ್ಯೂ ಯಾ ಫಾರೆಸ್ಟ್ ಆಫೀಸರಿಗೆ ಎಲ್ಲಾ ಸಹಾಯವನ್ನೂ ಒದಗಿಸಬೇಕು.

ಇದು ತೆಗೆದುಹಾಕಲ್ಪಡಬೇಕು.

ಕಾರಣಗಳು:—ತೂಕದ ಪ್ರಕಾರ ಬೋನಸು ಕೊಡಬೇಕೆಂದು ಸೂಚಿಸಿರುವದರಿಂದ ಸುತ್ತಳತೆಯನ್ನು ತೆಗೆಯುವ ಅವಶ್ಯಕತೆ ಇಲ್ಲ.

ಕಿತ್ತ ಎಲ್ಲಾ ಮರಕ್ಕೂ ಬೋನಸು ಕೊಡಬೇಕಾಗಿರುವದರಿಂದ ಜಾಗದಲ್ಲಿರುವ ಪ್ರತಿ ಗಂಧದ ಮರಗಳ ಪಟ್ಟಿಯನ್ನು ಕೊಡಬೇಕೆಂದೆನ್ನುವ ಅವಶ್ಯಕತೆ ಇಲ್ಲ. ಅದರಿಂದ ಜಾ

ದ ಮೂಲೀಕರ ಹಣ ನುಕ್ಕು ಸಮಯವು ಹಾಳಾಗುವದಲ್ಲದೆ ಏನೂ ಪ್ರಯೋಜನವಾಗಲಾರದು.

ರೂಲ್ ನಂಬರು 4. ಈ ರೂಲ್ಸ್‌ಗಳ ಮೇರೆ ಬೋನಸು 5—5—37 ರಿಂದ ಮತ್ತು ಆಚೆಗೆ ಕೊಡಲಾಗುತ್ತೆ.

ಇದು ಈ ಪ್ರಕಾರ ತಿದ್ದುಪಡಿಯಾಗಬೇಕು—'ಈ ರೂಲುಗಳು ಜಾರಿಗೆ ಬಂದೊಡನೆಯೇ ಈ ನಿಬಂಧನೆಗಳಿಗನುಸಾರವಾಗಿ ಬೋನಸುಗಳು ಕೊಡಲ್ಪಡುವದು.'

ತಿದ್ದುಪಡಿಗೆ ಕಾರಣಗಳು—ಮೂಲೀಕರಿಗೆ ಎಷ್ಟು ಬೇಗ ಬೋನಸ್ಸಿನ ಪ್ರಯೋಜನವನ್ನು ಕೊಡಲಾಗುವದೋ ಅಷ್ಟೇ ಹೆಚ್ಚಾಗಿ ಮೂಲೀಕರಲ್ಲಿ ಗಂಧದ ಮಂಗಳನ್ನು ರಕ್ಷಿಸುವ ಪ್ರೋತ್ಸಾಹ ಉಂಟಾಗುವುದು. ಆದ್ದರಿಂದ ಈ ರೂಲುಗಳು ಆದಷ್ಟು ಬೇಗನೆ ಜಾರಿಗೆ ಬರಬೇಕು.

ರೂಲು ನಂಬರು 5. ಈ ರೂಲ್ಸ್‌ಗಳು ಕಾಲಾನುಗುಣವಾಗಿ ಅನುಭವದ ಮೇಲೆ ಬದಲಾವಣೆ ಹೊಂದತಕ್ಕವುಗಳಾಗಿವೆ

ಇದು ಇದ್ದಂತೆಯೇ ಇರಲಿ.

ಎನೆಕ್ಷರ್ (ಜೋಡಣೆ.)

ಗಂಧದ ಗಿಡವನ್ನು ಸಾಕಲು ತಿಳುವಳಿಕೆಗಳು.

'1. ಗಂಧವು ಕೊಡಗು ದೇಶದ ಹುಟ್ಟುವಳಿಯಲ್ಲೊಂದಾಗಿದೆ ಜಾಗದ ಮೂಲೀಕರು ಮರಗಳನ್ನು ಸರಿಯಾಗಿ ಪೋಷಣೆ ಮಾಡಿದರೆ ಮತ್ತು ಕಾಪಾಡಲು ತಕ್ಕ ನಿಗತೆಗೆದುಕೊಂಡು ಅಭಿವೃದ್ಧಿಪಡಿಸಿದ್ದಾದರೆ ಸರ್ಕಾರವು ಶೀಘ್ರದಲ್ಲಿ ಲಾಭ ಹೊಂದಬಹುದಾಗಿದೆ. ಮತ್ತು ಈ ಲಾಭದ ಒಂದಂಶವನ್ನು ಮೂಲೀಕನಿಗೆ ನೇಮವಾಗಿ ದೊಂಕಿಸಿಕೊಡುವುದೇ ರೈತರ ಜಾಗದಿಂದ ಸಾಗಿಸಲ್ಪಟ್ಟ ಸತ್ಯ ಮರಗಳಿಗೆ ಬೋನಸು ಕೊಡಬೇಕೆನ್ನುವ ಯೋಜನೆಯ ಉದ್ದೇಶ.

2 ಗಂಧದ ಸಸಿಗಳನ್ನು ಅಭಿವೃದ್ಧಿಪಡಿಸಬೇಕಾದರೆ ಅವುಗಳಿಗೆ ಪಕ್ಕದಲ್ಲಿ ನೆಂಳು ಬೆಳೆಸಬೇಕಾದದ್ದು ಅವಶ್ಯಕ. ಅಂಥ ನೆಂಳಿಲ್ಲದ ಅವು ಸರಿಯಾದ ಬೆಳವಣಿಗೆ ಹೊಂದಲಾರವು. ಚಿಕ್ಕ ಪ್ರಾಯದಲ್ಲಿ ಈ ತರ ನೆರಳಿಗೋಸ್ಕರ ಅವುಗಳ ಸುತ್ತಲೂ ತೊಗರಿಕಾಳು ಜೆಲ್ಲಿ ಅದರ ನೆರಳು ಬೆಳೆಸಬಹುದು. ಬೇಸಿಗೆಯಲ್ಲಿ (ಕೆಳಗಿನ ಚಿತ್ರದಲ್ಲಿ ಕಾಣಿಸಿರುವಂತೆ) ಬೇಲಿ ಹಾಕಿ ಕಂಬಗಳ ಮಧ್ಯಕ್ಕೆ ಹುಲ್ಲು ಹಂಡಿ ಕಟ್ಟುವುದರಿಂದ ಪಕ್ಕದಲ್ಲಿ ನೆರಳುಂಟುಮಾಡಬಹುದು. ಹೀಗೆ 2—3 ವರ್ಷ ಮಾಡಿದರೆ ಗಂಧದ ಗಿಡವನ್ನು ಬದುಕಿಸುವುದಕ್ಕೆ ಯಾವ ಕಷ್ಟವೂ ಆಗಲಾರದು.

3. ಗಂಧದ ಮಂಗಳು ಇತರ ಮರಗಳ ಆಶ್ರಯವಿಲ್ಲದೆ ಬಾಳಲಾರವೆಂಬ ತಿಳಿಯಬೇಕಾಗಿದೆ. ಗಂಧದ ಮಂದ ಮರದ ಬೇರು ಬೇರೆ ಮಂದ ಬೇರನ್ನೊಡನೆ ಕೂಡಬೇಕು; ಮತ್ತು, ಅವುಗಳ ಮೂಲಕವಾಗಿ ಆಹಾರ ವಸ್ತುಗಳನ್ನು ಹೊಂದಬೇಕು. ಹಾಗೆ ಸಂಭವಿಸಿದ ಪೋಷಣೆಯನ್ನು ದೊರಕಿಸಿಕೊಡಬಹುದಾದ ಬೇರೆ ಮರಗಳ ಪೈಕಿ ಈ ಕೆಳಗಿನವು ಅತ್ಯುತ್ತಮವಾದವುಗಳು. 1 ಬೇವಿನ ಮರ, 2 ಆವರಿಕೆ ಮರ, 3 ಕಾಡು ಗೇರು, 4 ಸಿರಿಗಂಧ, 5 ಕಾರಿಕೆ ಕಾಯಿ ಮರ, 6 ಬಿದಿರು.

4. ಗಿಡಕ್ಕೆ 3 ವರ್ಷವಾದ ಮೇಲೆ ಅಥವಾ 4½ ಅಡಿಗೆ ಮೇಲ್ಪಟ್ಟು ಎತ್ತರವಾದ ಮೇಲೆ ತಲೆ ಮೇಲಿನಿಂದ ಬೆಳಕು ಬೀಳುವಂತೆ ಮಾಡಬೇಕಾದದ್ದು ಅವಶ್ಯ. ಅನೇಕ ವೇಳೆ ಇತರ ಮಂದ ಕೊಂಬೆಗಳು ಗಂಧದ ಗಿಡದ ತಲೆ ಮೇಲೆ ಆವರಿಸಿಕೊಂಡಿರುತ್ತವೆ. ಹೀಗಾದರೆ ಗಂಧದ ಬೆಳವಣಿಗೆ ಕುಂದಿ ತಿಂದರ್ಥ. ಗಂಧಕ್ಕೆ ಕುಂದುಂಟು ಮಾಡುವ ಅಂಥಾ ಕೊನೆ ಕೊಂಬೆಗಳನ್ನು ಕಡಿಸುವುದರಿಂದ ಗಂಧದ ಗಿಡವು ಜಾಗ್ರತೆ ಬೆಳೆಯಲು ಸಹಾಯವಾಗುತ್ತೆ. ಅಂದರೆ ಸರ್ಕಾರಕ್ಕೂ, ಜಾಗದ ಮೂಲೀಕನಿಗೂ ಜಾಗ್ರತೆ ಲಾಭ ಸಿಕ್ಕಲು ಸಹಾಯವಾಗುತ್ತೆ. ಮಳೆಗಾಲದಲ್ಲಿ ತಲೆ ಮೇಲಿನ ಮರದ ಕೊಂಬೆಗಳಿಂದ ನೀರು ಹನಿಕೆ ಗಂಧಕ್ಕೆ ತೊಂದರೆಯಾಗುವುದರಿಂದ ಅಂಥಾ ಕೊಂಬೆಗಳನ್ನು ಕಡಿಯಿಸುವುದುತ್ತಮ. ಈ ಕಾರಣದಿಂದಲೇ ಹಿಂದೆ ಸಾವಿರಾರು ಸಸಿಗಳು ನಾಶವಾಗಿವೆ.

5. ಗಂಧದ ಮರಕ್ಕೆ ಬೆಂಕಿ ತಗಲದ ಹಾಗೆ ಕಾಪಾಡಲು ಪ್ರತಿ ಮಂದ ಸುತ್ತಲೂ ಇರುವ ಹುಲ್ಲು ಮತ್ತು ಇತರ ಅಡಿಗಾಡು ಕಿತ್ತು ತೆಗೆದು ದೂರದಲ್ಲಿ ಗುಡ್ಡೆ ಮಾಡಿ ಸುಡಬೇಕು ಮತ್ತು ಈ ಕೆಲಸವು ಯಾರಾದರೂ ತಕ್ಕ ಜವಾಬ್ದಾರಿಯುಳ್ಳ ಜನರ ಉಸ್ತುವಾರಿಯಿಂದ ಮಾಡಲ್ಪಡಬೇಕು.

6 ಇದರಲ್ಲಿ ಆಶಕ್ತಿಯುಳ್ಳವರು ಇನ್ನ್ಯಾವದಾದರೂ ತಿಳುವಳಿಕೆಯನ್ನು ಹತ್ತಿರದ ರೇಂಜು ಆಫೀಸರಿಂದ ಅರಿತುಕೊಳ್ಳಬಹುದು.'

ಮೇಲೆ ಕಾಣಿಸಿದ ತಿದ್ದುಪಡಿಗಳು ಅಧಿಕಾರಿಗಳ ಸೂಚನೆಗಳನ್ನು ಪಾಲಿಸಲೇಬೇಕೆಂಬದನ್ನು ಪ್ರತಿಪಾದಿಸುವದಿಲ್ಲವಾದ್ದರಿಂದ ಈ ಜೋಡಣೆಯು (ಎನೆಕ್ಷರ್) ತೆಗೆದುಹಾಕಲ್ಪಡಬೇಕು. ಅಧಿಕಾರಿಗಳು ಗಂಧದ ಬೆಳವಣಿಗೆಯ ವಿಷಯ ಭೂಮೂಲೀಕರಿಗೆ ಕೊಡಬಹುದಾದ ಅಭಿಪ್ರಾಯಗಳು ವ್ಯವಸಾಯ ಇಲಾಖೆಯವರು ರೈತರಿಗೆ ವ್ಯವಸಾಯ ವಿಷಯಗಳ ರೀತಿಯಲ್ಲಿ ಕೊಡುವ ಬೋಧನೆಗಳೋಪಾದಿಯಲ್ಲಿ ಇರತಕ್ಕದ್ದು. ಇವುಗಳು ಶಾಸನಗಳೋಪಾದಿಯಲ್ಲಿರದೆ ಬರೀ ಬೋಧನೆಗಳಂತಿರಬೇಕು.

ನನ್ನ ವಸ್ತ್ರಗಳನ್ನು ಒಗೆಯುವುದು ಈಗ 501 ಸಾಬೂನಿನಿಂದ ಬಹಳ ಬೇಗನೆ ಆಗುತ್ತದೆ.

ಹೌದು, ಅಲ್ಲದೆ ವಸ್ತ್ರಗಳು ಸಹ ಶುಭ್ರ ಮತ್ತು ಹೊಸಾಗಿ ವದಾಗಿ ನನಗೆ ಕಂಡುಬಂದಿದೆ.

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ ಮೂರಾಬೆದ ಮಳಿಗೆ, TOMCo ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

501 Soap

ತಯಾರಿಸುವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—45. ಕೊಡಗಿನ ಡಿಸ ್ಟ್ರಿಬ್ಯೂಟರ್—ಬಿ: ಎಸ್. ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೊರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ ವಿನೀತ ಸೇವಕರ ಏರ್ಪಾಡ ಇದೆ.

ಆಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ವಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನುಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—16 ಪ್ರೊಪ್ರೈಟರ್:—ನಾಮುನೆ ರಾವ್, ಗಾಯತೊಂಡೆ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನ್ನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರು 68, ಕೊಚಿನ್.

ಸೆಲ್ಲಿಂಗ್ ಏಜೆಂಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.
52—43

ನವರತ್ನ ಫಾರ್ಮಸಿ, ಕೊಚಿನ್.

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—24]

ಳಂ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಿಕಂಪನಿ ಇಲಿಂ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯೂ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕಿ,
(25—26) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯೂವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಕೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಂಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಂಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವಂಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು— 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—31 ಚೌಖಂಬಾ ಬೆನಾರಿಸ್, (ಕಾಶೀ.)

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ತರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ ಓವಜರ್ ಪುಸ್ತಕಗಳೂ, ರಿಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಂ ಪುಸ್ತಕಗಳೂ ನಮ್ಮ ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಷಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,
26—26 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲೂಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.

ಪತಿ ವತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.

ಪಾಲಿಸಿದಾರರು ಅಕಾಸ್ಮಾತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.

ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
26—16 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ

ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.
52—5 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,180— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್, ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ಕಾರ್ಯಕ್ಷೇತ್ರ 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಕ. ಟ. ಡೋಂಗರೆ ಕಂಪೆನಿ,
(52—5) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— Empire of India Life Building, BOMBAY.

52—19

Branch Office:— 152/3—Commercial Street, BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಪಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಏಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಾದಿಂದ ತಯಾರಿಸಿದ ಮಧುರಾಮೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮೂಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ. ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಪ್ರಮಾಣ:—ಬೆಳಿಗನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವ್.)

52—30 ಕೊಡಗಿನ ಏಜಂಟರು—ನಾವೆಲ್ಟಿ ಸ್ಟೋರ್ಸ್, ಮಡಿಕೇರಿ
ಬಿ. ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪಿಸಲ್ಪಡದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	....	ರೂ. 7,62,42,761
ವಾರ್ಷಿಕ ಉತ್ಪತ್ತಿ	....	....	ರೂ. 3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	....	ರೂ. 54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	....	ರೂ. 16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ. 15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸಾತ್ ಪೇರೇಡ್, ಬೆಂಗಳೂರು, 52—12

ಯಂ. ವಿ. ಮುತ್ತುಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by P. I Belliappa, at 'Kodagu" Press Mercara for "Kodagu" Ltd.